# ಕರ್ನಾಟಕ ಸಮಾಜವಾದಿ ವೇದಿಕೆ

## ಅರ್ಧವಾರ್ಷಿಕ ವರದಿ

## ಜುಲೈ–ಡಿಸೆಂಬರ್ 2021




ಶಾಂತವೇರಿ ಗೋಪಾಲಗೌಡ

# ದೇಶದ-ಕರ್ನಾಟಕದ ಸಮಾಜವಾದಿ ಧುರೀಣರು


ಕರ್ನಾಟಕದ ಸಮಾಜವಾದಿಗಳಲ್ಲಿ ಶಾಂತವೇರಿ ಗೋಪಾಲಗೌಡ, ಜೆ.ಎಚ್. ಪಟೇಲ್, ಎಂ.ಪಿ. ಪ್ರಕಾಶ್, ಕೋಣಂದೂರು ಲಿಂಗಪ್ಪ, ಎಸ್.ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಮುಂತಾದವರು ರಾಜಕಾರಣ ಕ್ಷೇತ್ರದಲ್ಲಿ ಹಾಗೂ ರಾಷ್ಟ್ರಕವಿ ಕುವೆಂಪು, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಪ್ರೊ|| ಚಂದ್ರಶೇಖರ ಪಾಟೀಲ ಕೆ. ರಾಮದಾಸ್, ದೇವನೂರ ಮಹಾದೇವ ಮುಂತಾದವರು ಸಾಹಿತ್ಯ–ಕಲಾ ಕ್ಷೇತ್ರಗಳಲ್ಲಿ ಸಮಾಜವಾದಿ ಆಶಯವು ಸಾಕಾರಗೊಳ್ಳಲು ಕಾರಣಕರ್ತರಾದರು.

ಜನಸಂಘಟನೆ, ಹೋರಾಟ, ಅನ್ಯಾಯದ ಖಂಡನೆ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು ಮುಖ್ಯವಾಗಿ ಪ್ರೊ|| ಎಂ.ಡಿ. ನಂಜುಂಡಸ್ವಾಮಿ, ಎನ್.ಡಿ.ಸುಂದರೇಶ್, ಪ್ರೊ|| ಬಿ.ಕೃಷ್ಣಪ್ಪ, ಮುಂತಾದವರು.


---



ಮಹಾತ್ಮಾ ಗಾಂಧೀಜಿ



ಡಾ|| ಬಿ.ಆರ್.ಅಂಬೇಡ್ಕರ್



ಆಚಾರ್ಯ ನರೇಂದ್ರ ದೇವ



ಜಯಪ್ರಕಾಶ ನಾರಾಯಣ



ರಾಮಮನೋಹರ ಲೋಹಿಯಾ



ಕಮಲಾದೇವಿ ಚಟ್ಟೋಪಾಧ್ಯಾಯ




ಯೂಸುಫ್ ಮೆಹರ್ ಆಲಿ



ಪ್ರೊ|| ಮಧು ದಂಡವತೆ



ಜಾರ್ಜ್ ಫರ್ನಾಂಡಿಸ್



ಮಧು ಲಿಮಯೆ

# ಕರ್ನಾಟಕ ಸಮಾಜವಾದಿ ವೇದಿಕೆ

# ಅರ್ಧವಾರ್ಷಿಕ (ಜುಲೈ–ಡಿಸೆಂಬರ್ 2021) ವರದಿ

**ಆತ್ಮೀಯರೆ,**

ಭಾರತೀಯ ಸಮಾಜವಾದಿ ಆಂದೋಲನದ ಗಾಢ ಪ್ರಭಾವ ಕರ್ನಾಟಕದ ಮೇಲೂ ಆಗಿದೆ; ಇಲ್ಲಿ ಅನೇಕ ಸಮಾಜವಾದಿ ಧುರೀಣರು, ಚಿಂತಕರು ಮತ್ತು ಕಾರ್ಯಕರ್ತರು ಗಮನಾರ್ಹ ಕೊಡುಗೆಯನ್ನು ನೀಡಿದ್ದಾರೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಶೋಷಣೆಯನ್ನು ಮತ್ತು ಕಮ್ಯುನಿಸಮ್ ವ್ಯವಸ್ಥೆಯಲ್ಲಿನ ಅರೆ–ಕೊರೆಗಳನ್ನು ಗುರುತಿಸಿ, ನಾವು ಸಮಾಜವಾದದ ವೈಶಿಷ್ಟ್ಯವನ್ನು ಮತ್ತು ಮಹತ್ವವನ್ನು ಅರ್ಥಮಾಡಿಕೊಳ್ಳುವ ತುರ್ತು ಇದೆ.

ಪ್ರಸ್ತುತ, ಕರ್ನಾಟಕದಲ್ಲಿ ಸಮಾಜವಾದಿ ಚಿಂತನೆಯನ್ನು ಆಧಾರವಾಗಿ ಹೊಂದಿರುವ ಸಂಸ್ಥೆಗಳು, ಪ್ರಕಾಶನಗಳು, ಪತ್ರಿಕೆಗಳು, ಸಂಘಗಳು ಕೆಲವು ಇವೆ. ಇವುಗಳ ಮೂಲಕ ಸಮಾಜವಾದಿ ಚಿಂತನೆಯನ್ನು ಪ್ರಸಾರ ಮಾಡುವ ಕಾರ್ಯ, ಸಮಾಜವಾದಿ ಆಶಯದ ಚಟುವಟಿಕೆಗಳು ಆಗೀಗ ಆಗುತ್ತಿವೆ. ಆದರೆ, ರಾಜ್ಯದ ವಿದ್ಯಾರ್ಥಿ–ಯುವಜನರನ್ನು ಪ್ರಭಾವಿಸುವ ನಿಟ್ಟಿನಲ್ಲಿ ನಿಶ್ಚಿತ ಪ್ರಯತ್ನಗಳು ನಡೆಯುವುದು ಅತಿ ಜರೂರಿನದು. ಈ ನಿಟ್ಟಿನಲ್ಲಿ ನಮ್ಮ ಸಮಾಜವಾದಿ ಹಿರಿಯರು, ಚಿಂತಕರು ಆಲೋಚಿಸುವುದು ಸೂಕ್ತ.

ವಿದ್ಯಾರ್ಥಿ–ಯುವಜನರ ಸಂಘಟನೆ ಇಲ್ಲದೆ, ಸಮಾಜವಾದಿ ವಿಚಾರವನ್ನು ಮುಂದಿನ ಪೀಳಿಗೆಗೆ ದಾಟಿಸುವುದು ಕಷ್ಟಸಾಧ್ಯ. ಇಂದು ಇಡೀ ಸಮಾಜದ ಮುಂದಿರುವ ಸವಾಲುಗಳನ್ನು ಅರ್ಥಪೂರ್ಣವಾಗಿ ಇತ್ಯರ್ಥ ಮಾಡುವ ಸೈದ್ಧಾಂತಿಕ ಸ್ಪಷ್ಟತೆ ಇರುವುದು ಸಮಾಜವಾದಿ ಸಿದ್ಧಾಂತಕ್ಕೆ ಮಾತ್ರ ಎಂಬುದೇ ನಮಗೆ ಇಂದು ಅರ್ಥವಾಗಬೇಕಿದೆ.

**ಕರ್ನಾಟಕ ಸಮಾಜವಾದಿ ವೇದಿಕೆ** ಒಂದು ಅತಿ ಪುಟ್ಟ ಗುಂಪು. ಇದನ್ನು ಬಹುದೊಡ್ಡ ಪ್ರಮಾಣದಲ್ಲಿ ಬೆಳೆಸುವ ಕನಸೂ ನನಗಿಲ್ಲ. ಇದು ಮುಖ್ಯವಾಗಿ ನನ್ನ ಶಕ್ತಿ–ಚಿಂತನೆ–ಸಾಮರ್ಥ್ಯಕ್ಕೆ ಅನುಗುಣವಾಗಿ ಬೆಳೆಸುತ್ತಿರುವ ಗುಂಪು. ಕೆಲವಾರು ಮಿತ್ರರು ಆರ್ಥಿಕ ನೆರವು ನೀಡುತ್ತಿದ್ದಾರೆ. ಅಷ್ಟರಲ್ಲಿ ಏನೇನು ಕೆಲಸಗಳನ್ನು ಮಾಡಲು ಸಾಧ್ಯವೊ ಅಷ್ಟನ್ನು ಈಗ ಮಾಡಲಾಗುತ್ತಿದೆ.

ಕರ್ನಾಟಕದಲ್ಲಿ ಸಮಾಜವಾದಿ ಚಿಂತನೆಯ ಹಿನ್ನೆಲೆ ಹೊಂದಿದ ವಿದ್ಯಾರ್ಥಿ–ಯುವಜನರ ಸಂಘಟನೆ ಅತ್ಯವಶ್ಯ ಎಂಬುದು ಈಗಲೂ ನನ್ನಲ್ಲಿ ಗಾಢವಾಗಿ ಮನೆಮಾಡಿದೆ. ಈ ವಿಷಯದಲ್ಲಿ ಹಿರಿಯರು ಚಿಂತನೆ ಮಾಡಬೇಕು; ಆಸಕ್ತ ಯುವಜನರನ್ನು ಗುರುತಿಸಬೇಕು. ಅವರಿಗೆ ಒತ್ತಾಸೆ ನೀಡಬೇಕು.

ಪ್ರಸ್ತುತ, ಅನೇಕ ವರ್ಷಗಳಿಂದ, ಡಿ.ಎಸ್. ನಾಗಭೂಷಣ ಅವರು 'ಹೊಸ ಮನುಷ್ಯ' ಪತ್ರಿಕೆಯನ್ನು ನಿಯತವಾಗಿ ತರುತ್ತಾ, ಅಧ್ಯಯನ ಶಿಬಿರಗಳನ್ನು ಮಾಡುತ್ತಾ ಇದ್ದಾರೆ. ಇನ್ನೊಂದು ಕಡೆ, ಪ್ರೊ॥ ರವಿವರ್ಮ ಕುಮಾರ್ ಅವರೂ ಕೆಲವಾರು ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಡಾ॥ ಟಿ.ಎನ್.ಪ್ರಕಾಶ್ ಕೂಡ ಹಲವು ಚಟುವಟಿಕೆಗಳನ್ನು ನಡೆಸಿದ್ದಾರೆ. ಬಳ್ಳಾರಿಯ ಚನ್ನಬಸವಣ್ಣ, ಮೈಸೂರಿನ ಪ. ಮಲ್ಲೇಶ್ ಮತ್ತಿತರರು ನಡೆಸುತ್ತಿರುವ ಚಟುವಟಿಕೆಗಳನ್ನು ನಿಯತವಾಗಿ ತಿಳಿದುಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಇಷ್ಟರ ಹೊರತಾಗಿ, ಸಮಾಜವಾದಿ ಆಶಯ ಹೊಂದಿದ ಬೇರಾವುದೇ ಚಟುವಟಿಕೆಗಳು ರಾಜ್ಯದಲ್ಲಿ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಮೇಲೆ ಉಲ್ಲೇಖಿಸಿದ ಈ ಮೂವರೂ ಒಗ್ಗೂಡಿ ಸಮಾಜವಾದಿ ಆಶಯವನ್ನು ವಿದ್ಯಾರ್ಥಿ–ಯುವಜನರ ಬಳಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಏನಾದರೂ ನಿಶ್ಚಿತ ಚಟುವಟಿಕೆಗಳನ್ನು ಮಾಡಲು ಸಾಧ್ಯವಾದರೆ, ಅಂಥ ಪ್ರಯತ್ನದೊಂದಿಗೆ **ಕರ್ನಾಟಕ ಸಮಾಜವಾದಿ ವೇದಿಕೆ** ತನ್ನ ಮಿತಿಯಲ್ಲಿ ಪಾಲ್ಗೊಳ್ಳಲಿದೆ.

* * *

'ಕರ್ನಾಟಕ ಸಮಾಜವಾದಿ ವೇದಿಕೆ' ವಿದ್ಯಾರ್ಥಿ–ಯುವಜನರನ್ನು ತಲುಪಲು ಹೆಚ್ಚು ಆಸಕ್ತಿಯನ್ನು ಹೊಂದಿದೆ. ವಿವಿಧ ಜಿಲ್ಲೆಗಳಲ್ಲಿ ಆಸಕ್ತಿ ಇರುವ ಮತ್ತು ಸಮಯ ಕೊಡಬಲ್ಲ ಯುವಜನ ಪ್ರತಿನಿಧಿಗಳನ್ನು ಹೊಂದಿ, ಅವರ ಮೂಲಕ ಆ ಜಿಲ್ಲೆಗಳಲ್ಲಿ ಇತರ ವಿದ್ಯಾರ್ಥಿ ಯುವಜನರನ್ನು ಸಂಪರ್ಕಿಸುವ ಪ್ರಯತ್ನಗಳನ್ನು ಮಾಡಬಹುದು.

ಈ ಪ್ರತಿನಿಧಿಗಳ ಮೂಲಕ ಜಿಲ್ಲೆಗಳಲ್ಲಿ ವಿಚಾರ ಗೋಷ್ಠಿ, ಕಾರ್ಯಾಗಾರ, ಆನ್‌ಲೈನ್ ಸಭೆ ಇತ್ಯಾದಿಗಳನ್ನು ಸಂಘಟಿಸಿ, ಅವುಗಳಲ್ಲಿ ವಿದ್ಯಾರ್ಥಿ–ಯುವಜನರನ್ನು ತೊಡಗಿಸುತ್ತಾ, ಜಿಲ್ಲೆ ಮತ್ತು ರಾಜ್ಯದಲ್ಲಿ ಜರುಗುವ ವಿದ್ಯಮಾನಗಳ ಬಗ್ಗೆ ಕಾಲಕಾಲಕ್ಕೆ ಪತ್ರಿಕಾಗೋಷ್ಠಿಗಳನ್ನು ಮಾಡುತ್ತಾ, ಪತ್ರಿಕಾ ಹೇಳಿಕೆಗಳನ್ನು ನೀಡುತ್ತಾ, ಸಮಾಜಹಿತ ಘಾತುಕ ಬೆಳವಣಿಗೆಗಳಿಗೆ ಪ್ರತಿರೋಧ ಸೂಚಿಸುತ್ತಾ, ಬಂಡವಾಳಶಾಹಿ–ಕೋಮುವಾದಿ–ಜಾತಿವಾದಿ ಶಕ್ತಿಗಳ ಹುನ್ನಾರಗಳನ್ನು ಸಮಾಜದ ಮುಂದೆ ಇಡುತ್ತಾ, ಸಮಾಜವಾದಿ ಆಶಯವನ್ನು ಪ್ರಸಾರ ಮಾಡಲು ನಿಶ್ಚಿತ ಪ್ರಯತ್ನಗಳನ್ನು ಮಾಡಲು ಸಾಧ್ಯ ಇದೆ.

* * *

ಯಾವುದೇ ಪತ್ರಿಕೆಯಲ್ಲಿ ಅಥವಾ ವಾಟ್ಸ್ಯಾಪ್ ಗುಂಪಿನಲ್ಲಿ ಒಂದು ಉತ್ತಮ ಬರಹ/ಅನುಭವ/ಲೇಖನ ಬಂದರೆ, ಅದನ್ನು ಕನಿಷ್ಠ 100 ಜನ ಸಮಾನ ಮನಸ್ಕ, ಸಮಾಜವಾದಿ ವಿದ್ಯಾರ್ಥಿ–ಯುವಜನರಲ್ಲಿ ಹಂಚಿ ಕೊಳ್ಳೋಣ ಎಂದು ಅನ್ನಿಸಿದರೆ, ನಮ್ಮ ಬಳಿ ಅಂಥವರ ವಿಳಾಸ, ಈಮೇಲ್, ಮೊಬೈಲ್ ನಂಬರ್‌ಗಳ ಪಟ್ಟಿ (ಡೇಟಾಬೇಸ್) ಇಲ್ಲ. ಇದನ್ನು ಮಾಡುವುದೂ

ಅತ್ಯವಶ್ಯ ಎಂಬುದು ನನ್ನ ಅನಿಸಿಕೆ. ಅಲ್ಲದೆ, ಸಮಾಜವಾದಿ ಆಶಯ ಹೊಂದಿರುವ ನೂರಾರು ಜನರು ಈಗಾಗಲೇ ನಮ್ಮ ರಾಜ್ಯದಲ್ಲಿ ಇದ್ದಾರೆ. ಅವರ ಒಂದು ಡೇಟಾಬೇಸ್ ಸಿದ್ಧಪಡಿಸುವ ಅವಶ್ಯಕತೆ ಇದೆ. ನಮ್ಮಲ್ಲಿ ಒಂದು ಪರಿಪೂರ್ಣ ಡೇಟಾಬೇಸ್ ಇದ್ದಲ್ಲಿ, ಎಲ್ಲರನ್ನು ಕಾಲಕಾಲಕ್ಕೆ ಸಂಪರ್ಕಿಸಲು ಅನುಕೂಲ ಆಗುವುದು ನಿಶ್ಚಿತ.

ಈ ಹಿನ್ನೆಲೆಯಲ್ಲಿ ತುರ್ತಾಗಿ ಡೇಟಾಬೇಸ್ ಮಾಡಬೇಕಿದೆ. ಇದನ್ನು ಸಿದ್ಧಪಡಿಸುವಲ್ಲಿ 'ಕರ್ನಾಟಕ ಸಮಾಜವಾದಿ ವೇದಿಕೆ' ಪಾಲ್ಗೊಳ್ಳಲು ಸಿದ್ಧ. ಇದಕ್ಕಾಗಿ ಎಲ್ಲರ ಸಹಕಾರವನ್ನು ಕೋರಲಾಗಿದೆ.

* * *

2021ರ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಯುವಜನರಿಗಾಗಿ 'ಸಮಾಜವಾದಿ ವಿಚಾರ ಶಿಬಿರ' ಏರ್ಪಡಿಸುವುದು ಸಾಧ್ಯವಾಯಿತು. ಅದರ ಬಗ್ಗೆ ಪ್ರತ್ಯೇಕ ವರದಿ ಕೂಡ ಇಲ್ಲಿದೆ.

* * *

ಕಳೆದ ವರ್ಷ, 'ಕರ್ನಾಟಕ ಸಮಾಜವಾದಿ ವೇದಿಕೆ'ಯ 2020ರ ವರದಿಯನ್ನು ಕೆಲವಾರು ಮಿತ್ರರೊಂದಿಗೆ ಹಂಚಿಕೊಂಡಿದ್ದೆ. ಅದು ನಮ್ಮ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

2021ನೇ ವರ್ಷದ ಅರ್ಧ ವಾರ್ಷಿಕ ವರದಿಯನ್ನೂ ಈ ಹಿಂದೆ ಸಿದ್ಧಪಡಿಸಿ, ವೆಬ್‌ಸೈಟ್‌ಗೆ ಹಾಕಲಾಗಿದೆ. ಆಸಕ್ತರು ದಯಮಾಡಿ ಗಮನಿಸಬೇಕು.

ಈ ವರದಿಗಳಲ್ಲಿ, ಆಯಾ ಅವಧಿ/ವರ್ಷದಲ್ಲಿ ನಡೆಸಿದ ಚಟುವಟಿಕೆಗಳು, ಸಂಗ್ರಹವಾದ ಸಹಾಯಧನ, ಭರಿಸಲಾದ ಖರ್ಚಿನ ವಿವರಗಳು ಇವೆ.

ವರದಿ ಮತ್ತು ಲೆಕ್ಕ-ಪತ್ರಗಳನ್ನು ಯಾರಾದರೂ ನೋಡಬಹುದು; ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ಅಸಾಧ್ಯ ಎಂದೆನಿಸಿದರೆ, ಅಂಥವರು ನನಗೆ ಕಾಲ್ ಮಾಡಿದರೆ, ವರದಿಯನ್ನು ಪೋಸ್ಟ್/ಕೊರಿಯರ್ ಮೂಲಕ ಕಳಿಸಲು ಸಾಧ್ಯವಿದೆ. ಈ ಕುರಿತು ಯಾವುದೇ ಸಲಹೆ-ಸೂಚನೆಗಳಿಗೆ ಸ್ವಾಗತ ಇದೆ.

* * *

2021ರ ಕಡೇ ಭಾಗದಲ್ಲಿ ಆಕಸ್ಮಿಕವಾಗಿ 'ಕರ್ನಾಟಕ ಸಮಾಜವಾದಿ ವೇದಿಕೆ' ಸಂಪರ್ಕಕ್ಕೆ ಬಂದ ಮೂವರು ಕನ್ನಡ ಯುವಕರು (ಒಬ್ಬರು ಬೆಂಗಳೂರು, ಇನ್ನೊಬ್ಬರು ಜರ್ಮನಿ ಮತ್ತು ಮತ್ತೊಬ್ಬರು ಅಮೆರಿಕಾದಲ್ಲಿ ಇರುವವರು) ವೇದಿಕೆ ಕುರಿತು ವಿಶೇಷ ಆಸಕ್ತಿಯನ್ನು ತೋರಿದ್ದಾರೆ. ಆಧುನಿಕ ತಂತ್ರಜ್ಞಾನದ ನೆರವಿನಿಂದ ಹೆಚ್ಚು ಯುವಜನರಿಗೆ ಸಮಾಜವಾದಿ ವಿಚಾರವನ್ನು ತಲುಪಿಸುವ ನಿಟ್ಟಿನಲ್ಲಿ ಅವರು ಮುತುವರ್ಜಿ ವಹಿಸಿದ್ದಾರೆ.

ಈ ಕುರಿತು ಅವರು ಕೆಲವು ಹೆಜ್ಜೆಗಳನ್ನೂ ಇಟ್ಟಿದ್ದಾರೆ. ಅವರ ಆಶಯಕ್ಕೆ ಕರ್ನಾಟಕ ಸಮಾಜವಾದಿ ವೇದಿಕೆಯ ಬೆಂಬಲ ಇದೆ. ಅವರು ತಮ್ಮ ಪ್ರಯತ್ನಗಳಲ್ಲಿ ಯಶಸ್ಸು ಸಾಧಿಸಲಿ ಎಂದು ಹಾರೈಸುತ್ತೇನೆ.

**ಮಂಗ್ಳೂರ ವಿಜಯ**

ಜನೆವರಿ 2022 ಪ್ರಧಾನ ಸಮನ್ವಯಕಾರರು

# ಸಂಕ್ಷಿಪ್ತ ವರದಿ

'ಕರ್ನಾಟಕ ಸಮಾಜವಾದಿ ವೇದಿಕೆ' ಚಟುವಟಿಕೆಗಳು ತುಲನಾತ್ಮಕ ವಾಗಿ 2021ರ ಎರಡನೇ ಭಾಗದಲ್ಲಿ ಕಡಿಮೆ ಆಗಿವೆ. ಹಾವೇರಿ, ಮಂಡ್ಯ ಜಿಲ್ಲೆಗಳಲ್ಲಿ 'ಕರ್ನಾಟಕ ಸಮಾಜವಾದಿ ವೇದಿಕೆ' ಕಾರ್ಯ ಚಟುವಟಿಕೆಗಳನ್ನು ನಡೆಸಲು ತಮ್ಮನ್ನು ತೊಡಗಿಸಿಕೊಂಡಿದ್ದ ಮಿತ್ರರನ್ನು ಅನಾರೋಗ್ಯ ಮತ್ತು ಸಮಯಾಭಾವ ಕಾಡಿತು. ಜೊತೆಗೆ, ಕೋವಿಡ್ ವಾತಾವರಣ ಕೂಡ ಬಹು ಮುಖ್ಯ ಕಾರಣವಾಯಿತು.

ಹಾಗಾಗಿ, ಗೂಗಲ್ ಮೀಟ್ ನಡೆಸುವುದನ್ನು ಮಾತ್ರ ಮುಂದುವರೆಸಲಾಯಿತು. ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ನಡೆಸಲಾದ ಗೂಗಲ್ ಮೀಟ್‌ಗಳ ವಿವರಗಳು ಮುಂದಿನ ಪುಟಗಳಲ್ಲಿ ಇವೆ.

ಗೂಗಲ್ ಮೀಟ್‌ಗಳ ಮೂಲಕ ರಾಜ್ಯದ ನೂರಾರು ಯುವಜನರು 'ಕರ್ನಾಟಕ ಸಮಾಜವಾದಿ ವೇದಿಕೆ' ಸಂಪರ್ಕಕ್ಕೆ ಬಂದರು. ಆದರೆ, ಇವರಲ್ಲಿ ಸಮಾಜವಾದಿ ಚಿಂತನೆ ಬಗ್ಗೆ ಆಸಕ್ತಿ ಬೆಳೆಸಿಕೊಂಡವರ ಸಂಖ್ಯೆ ಕಡಿಮೆ. ಈ ನಿಟ್ಟಿನಲ್ಲಿ ಪ್ರಯತ್ನಗಳು ಮುಂದುವರೆದಿದ್ದು, ಕ್ರಮೇಣ ಈ ಯುವಜನರು ಸಮಾಜವಾದದ ವೈಶಿಷ್ಟ್ಯ, ಅನಿವಾರ್ಯತೆಗಳನ್ನು ಮನವರಿಕೆ ಮಾಡಿಕೊಳ್ಳುವರು ಎಂಬ ನಂಬಿಕೆ ಇದೆ. 2021ರ ಎರಡನೇ ಭಾಗದಲ್ಲಿನ ಕೆಲವು ಮುಖ್ಯಾಂಶಗಳನ್ನು ಹೀಗೆ ಗುರುತಿಸಬಹುದು.

* ವಿಶಿಷ್ಟ ವಿಷಯಗಳನ್ನು ವಿದ್ಯಾರ್ಥಿ-ಯುವಜನರಿಗೆ ತಿಳಿಸಲು ಕಿರು ಪುಸ್ತಕಗಳನ್ನು ಪ್ರಸಾರ ಮಾಡುವ ಕಾರ್ಯವನ್ನು ಪ್ರತಿ ತಿಂಗಳೂ ಮಾಡಿಕೊಂಡು ಬರಲಾಗಿದೆ.

* ಕರ್ನಾಟಕ ಸಮಾಜವಾದಿ ವೇದಿಕೆ ಸಂಪರ್ಕದಲ್ಲಿ ಇರುವ ಯುವಜನರು ತಮ್ಮ ಸುತ್ತಮುತ್ತ ಇರುವ ಗ್ರಾಮ ಪಂಚಾಯತ್ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗುವುದನ್ನು ಉತ್ತೇಜಿಸಲಾಗಿದೆ.

* ಕರ್ನಾಟಕ ಸಮಾಜವಾದಿ ವೇದಿಕೆ ಸಂಪರ್ಕದಲ್ಲಿ ಇರುವ ಯುವಜನರು ತುಮಕೂರಿನ ಮಿತ್ರರು ಹೊರತರುತ್ತಿರುವ 'ಯುವ ಧ್ವನಿ' ಪತ್ರಿಕೆಯ ಪ್ರಸಾರ ಕಾರ್ಯದಲ್ಲಿ ತೊಡಗಿದ್ದಾರೆ.

* ಮಹಾರಾಷ್ಟ್ರದ ಸೇವಾಗ್ರಾಮದಲ್ಲಿ ನಡೆದ 'ಸೋಷಲಿಸ್ಟ್ ಪಾರ್ಟಿ (ಇಂಡಿಯಾ)' ಪಕ್ಷದ ಅಧಿವೇಶನದಲ್ಲಿ ಭಾಗವಹಿಸಲು, ಮೂವರು ಯುವಕರನ್ನು ಕಳುಹಿಸಿ ಕೊಡಲಾಗಿದೆ.

**ಗಮನಿಸಿ**

**ಕರ್ನಾಟಕ ಸಮಾಜವಾದಿ ಫೋರಮ್ ಸಹಾಯಧನ ನಿರೀಕ್ಷಿಸುತ್ತದೆ.**

**ವಿದ್ಯಾರ್ಥಿ-ಯುವಜನರಲ್ಲಿ ಚಿಂತನಾ ಪ್ರವೃತ್ತಿ ಮೂಡುವುದಕ್ಕೆ ನೆರವಾಗಿ.**

**ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ**

https://karnatakasocialistforum.in

**ನಮ್ಮನ್ನು ಅರ್ಥಮಾಡಿಕೊಳ್ಳಿ; ವಿಮರ್ಶೆ ಮಾಡಿ; ನಮಗೆ ಸಲಹೆಗಳನ್ನು ನೀಡಿ.**

**ನಮ್ಮ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಿ.**



Dear All ,
Here is the first communications of the new year & following are the new updates to our website .

Blog
ಸಮಾಜವಾದ : ಸಮಾನ ಅವಕಾಶ, ಸಹಕಾರ, ಸಹೋದರತ್ವ, ಸಹನೆ ಮತ್ತು ಮನುಷ್ಯತ್ವ.-
Ajameer Pasha
Please share it with family and friends and give your valuable suggestions. Your support with guidance is always welcome.

Reach Us :
https://karnatakasocialistforum.in/
E-mail- karsocialistforum@gmail.com
Ph no - 7619458186/ 9449102294

Be Well, Be Safe
Warm Regards,

* ಸಂಪರ್ಕಕ್ಕೆ ಬಂದ ವಿದ್ಯಾರ್ಥಿಗಳು, ಶಾಲೆ–ಕಾಲೇಜು ಅಧ್ಯಾಪಕರ ಮೂಲಕ ಸಮಾಜವಾದಿ ಆಶಯಕ್ಕೆ ಹತ್ತಿರ ಇರುವ ಪುಸ್ತಕಗಳನ್ನು ತಲುಪಿಸಿ ವಿದ್ಯಾರ್ಥಿ–ಯುವಜನರಲ್ಲಿ ವೈಚಾರಿಕತೆ ಮೂಡುವುದನ್ನು ಉತ್ತೇಜಿಸಲಾಗಿದೆ.

* ವಿವಿಧ ಜಿಲ್ಲೆಗಳ ವಿಚಾರವಂತರನ್ನು –ಇದರಲ್ಲಿ ಹೆಚ್ಚಿನವರು ಯುವಜನರು ಎಂಬುದು ಗಮನಾರ್ಹ– ಸಂಪರ್ಕಿಸಿ, ಅವರು ಸಮಾಜ ಹಿತದ ಬಗ್ಗೆ ಗಾಢ ಕಾಳಜಿ ಹೊಂದಿರುವುದನ್ನು ಗಮನಿಸಲಾಗಿದೆ.

* ಕರ್ನಾಟಕ ಸಮಾಜವಾದಿ ವೇದಿಕೆ ಗೂಗಲ್ ಮೀಟ್ ಸಭೆಗಳಲ್ಲಿ ಯುವ ತರಬೇತುದಾರ ಭೂತರಾಜ್, ಪಿಎಚ್ ಡಿ ವಿದ್ಯಾರ್ಥಿನಿ ಬಿ. ಪವಿತ್ರ, ಉಪನ್ಯಾಸಕ ಬಿ. ರಾಜಪ್ಪ, ಕೋರ್ಟ್ ಉದ್ಯೋಗಿ ದಿನೇಶ್ ಬಿ.ಎಸ್. ದಲಿತ ಚಳವಳಿಯ ಹಿರಿಯ ಸಂಗಾತಿ ಪಾರ್ಥಸಾರಥಿ, ಕೆಜೆವಿಎಸ್ ಚಿಕ್ಕಮಗಳೂರು ಜಿಲ್ಲಾ ಶಾಖೆ ಪ್ರಧಾನ ಕಾರ್ಯದರ್ಶಿ ಡಿ. ಎಂ. ಮಂಜುನಾಥಸ್ವಾಮಿ, ನಿವೃತ್ತ ಬ್ಯಾಂಕ್ ಉದ್ಯೋಗಿ ಅನಂತ ಪದ್ಮನಾಭನ್, ಜಾನಪದ ಗಾಯಕ ಹುರುಗಲವಾಡಿ ರಾಮಯ್ಯ, ದಲಿತ ಚಳವಳಿಯ ಯುವ ಮುಂದಾಳು ಉಮಾಮಹಾದೇವ, ಹಿರಿಯ ಚಿಂತಕ ಪ್ರೊ॥ ಅಬ್ದುಲ್ ರಜಾಕ್, ದಲಿತ ಅಧ್ಯಯನಶೀಲ ವೈ. ರಾಜಣ್ಣ, ಪಿಎಚ್ ಡಿ ವಿದ್ಯಾರ್ಥಿ ಸತೀಶ್ ಹೊನ್ನನಾಗರ, ಉಪನ್ಯಾಸಕ ರವಿ ಬಿ.ಕೆ., ಪಂಚಾಯತ್ ವ್ಯವಸ್ಥೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ರಾಹುಲ್ ಸಿಂಗೆ, ಶಿರಾದಲ್ಲಿ ಮಾನವ ಬಂಧುತ್ವ ವೇದಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಎಸ್. ರಂಗರಾಜು, ಹಿರಿಯ ಸಮಾಜವಾದಿ ಲೇಖಕ ಪ್ರೊ॥ ಹನುಮಂತ, ವಿಚಾರವಂತೆ ಶಶಿಕಲಾ ಸೇರಿದಂತೆ ಅನೇಕರು ಭಾಗವಹಿಸಿ, ವಿಷಯವನ್ನು ತಿಳಿಸಿಕೊಟ್ಟರು.

ಸಮಾಜವಾದಿ ವಿಚಾರ ಪ್ರಸಾರ ಮಾಡಲು ಹಲವು ರೀತಿಯ ಪ್ರಯತ್ನಗಳನ್ನು ಕೈಗೊಳ್ಳಲಾಯಿತು. ರಾಜ್ಯದಲ್ಲಿನ ಹಿರಿಯ ಮತ್ತು ಕಿರಿಯ ಸಮಾಜವಾದಿಗಳ ಪಟ್ಟಿಯನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ 'ಸಮಾಜವಾದಿ ವೇದಿಕೆ' ಎಂಬ ವಾಟ್ಸ್ಯಾಪ್ ಗುಂಪನ್ನು ರಚಿಸಲಾಯಿತು. ಇದರಲ್ಲಿ

ಭಾಸ್ಕರ ರಾವ್, ಗುರುರಾಜ ಬುಧ್ಯ, ಜಿ.ವಿ.ಸುಂದರ್, ಹರಿಣಿ ಮಂಗಳೂರು, ಕೆ.ಆರ್.ಸುಭಾಷ್, ಎಲ್. ಕಾಳಪ್ಪ, ಕೋಡಿಹಳ್ಳಿ ರಂಗಪ್ಪ

# ಮಂಡ್ಯ ಜಿಲ್ಲೆಯಲ್ಲಿ

## ಕರ್ನಾಟಕ ಸಮಾಜವಾದಿ ವೇದಿಕೆ ಚಟುವಟಿಕೆಗಳು

ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ ಚಟುವಟಿಕೆಗಳನ್ನು ನಡೆಸುತ್ತಿರುವವರು ದಲಿತ ಚಳವಳಿಯ ಸಂಗಾತಿ ಮತ್ತು ಜಾನಪದ ಗಾಯಕ ಹುರುಗಲವಾಡಿ ರಾಮಯ್ಯ. ಆರೋಗ್ಯ ಸಮಸ್ಯೆಯಿಂದ 2021ರ ಕೊನೆಯ ಆರು ತಿಂಗಳಲ್ಲಿ ಜಿಲ್ಲೆಯಲ್ಲಿ ಹೆಚ್ಚು ಚಟುವಟಿಕೆಗಳನ್ನು ನಡೆಸಲು ಅವರಿಂದ ಸಾಧ್ಯವಾಗಿಲ್ಲ. ಆದರೆ, ಅವರು ಧೃಡತೆಯಿಂದ, ನಿಷ್ಠೆಯಿಂದ ಸಮಾಜವಾದಿ ಆಶಯವನ್ನು ಪ್ರಸಾರ ಮಾಡಲು ಬದ್ಧರಾಗಿರುವವರು. ಅವರ ಆಸಕ್ತಿಯಿಂದ ಮಂಡ್ಯ ಜಿಲ್ಲೆಯಲ್ಲಿ ನಡೆದ ಕೆಲವು ಚಟುವಟಿಕೆಗಳ ವರದಿ ಕೆಳಗಿದೆ.

ಆಗಸ್ಟ್ 21ರಂದು ಮಂಡ್ಯದ ಗಾಂಧಿ ಭವನದಲ್ಲಿ ನಡೆದ 'ರಾಗಿ ಲಕ್ಷ್ಮಣಯ್ಯ ನೆನಪಿನ ಕಾರ್ಯಕ್ರಮದಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ, ಮಂಡ್ಯ ಶಾಖೆ ವತಿಯಿಂದ ಉಚಿತವಾಗಿ ಪುಸ್ತಕಗಳನ್ನು ಆಸಕ್ತ ಸಭಿಕರಿಗೆ ನೀಡಲಾಯಿತು.

ಅದೇ ತಿಂಗಳ 31ರಂದು ಮಂಡ್ಯ ಗಾಂಧಿ ಭವನದಲ್ಲಿ 'ಕವಿ ಡಾ॥ ಸಿದ್ಧಲಿಂಗಯ್ಯ ನೆನಪಿನ ಕಾರ್ಯಕ್ರಮ ನಡೆಯಿತು. ಅಲ್ಲಿನ ಸಭಿಕರಿಗೆ ಕರ್ನಾಟಕ ಸಮಾಜವಾದಿ ವೇದಿಕೆ, ಮಂಡ್ಯ ಶಾಖೆಯ ವತಿಯಿಂದ ಕಿರು ಪುಸ್ತಕಗಳನ್ನು ವಿತರಣೆ ಮಾಡಲಾಯಿತು.

ಸೆಪ್ಟೆಂಬರ್ 9ರಂದು ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನ ಪಿಯು ಕಾಲೇಜಿನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಕರ್ನಾಟಕ ಸಮಾಜ ವಾದಿ ವೇದಿಕೆ, ಮಂಡ್ಯ ಶಾಖೆ ವತಿಯಿಂದ ಕಿರುಪುಸ್ತಕಗಳನ್ನು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ನೀಡಲಾಯಿತು.

ಅಕ್ಟೋಬರ್ 24ರಂದು 'ದಲಿತ ಚಳವಳಿ ಮತ್ತು ಸಮ ಸಮಾಜ ನಿರ್ಮಾಣ' ವಿಷಯ ಕುರಿತು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಬಸವನ ಬೆಟ್ಟದಲ್ಲಿ ನಡೆದ ಶಿಬಿರದಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ, ಮಂಡ್ಯ ಶಾಖೆ ವತಿಯಿಂದ ಪುಸ್ತಕಗಳನ್ನು ವಿತರಣೆ ಮಾಡಲಾಯಿತು.

ಡಿಸೆಂಬರ್ 21–22ರಂದು ಮಂಡ್ಯ ಗಾಂಧಿ ಭವನದಲ್ಲಿ 'ಹಿರಿಯ ದಲಿತ ಚಿಂತಕ–ಹೋರಾಟಗಾರ ಸುಂಡಳ್ಳಿ ನಾಗರಾಜ್' ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದವರಿಗೆ ಕರ್ನಾಟಕ ಸಮಾಜವಾದಿ ವೇದಿಕೆ, ಮಂಡ್ಯ ಜಿಲ್ಲಾ ಶಾಖೆಯ ವತಿಯಿಂದ ಕಿರುಪುಸ್ತಕಗಳನ್ನು ಕೊಡಲಾಯಿತು.

ಡಿಸೆಂಬರ್ 23ರಂದು ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಕಚೇರಿಯಲ್ಲಿ ನಡೆದ 'ಗ್ರಾಮ ಪಂಚಾಯತಿ ಸದಸ್ಯರು ಮತ್ತು ಮಹಿಳಾ ಸಂಘದ ಪ್ರತಿನಿಧಿಗಳ ಕಾರ್ಯಾಗಾರ'ದಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ, ಮಂಡ್ಯ ಜಿಲ್ಲಾ ಶಾಖೆ ವತಿಯಿಂದ ಕಿರುಪುಸ್ತಕಗಳನ್ನು ನೀಡಲಾಯಿತು.

ಡಿಸೆಂಬರ್ 28ರಂದು ಮದ್ದೂರು ತಾಲ್ಲೂಕು, ಹೊನ್ನಲಗೆರೆ ಶಾಲೆ ಮಕ್ಕಳಿಗೆ ಕರ್ನಾಟಕ ಸಮಾಜವಾದಿ ವೇದಿಕೆ, ಮಂಡ್ಯ ಜಿಲ್ಲಾ ಶಾಖೆ ವತಿಯಿಂದ ಕಿರುಪುಸ್ತಕಗಳನ್ನು ವಿತರಣೆ ಮಾಡಲಾಯಿತು.

ಡಿಸೆಂಬರ್ 31ರಂದು ಮದ್ದೂರಿನ ಪುರಸಭಾ ಸಭಾಂಗಣದಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮದಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ ವತಿಯಿಂದ ಕಿರುಪುಸ್ತಕಗಳನ್ನು ನೀಡಲಾಯಿತು.

ಮಂಡ್ಯ ಜಿಲ್ಲೆಯಲ್ಲಿ ಜುಲೈ–ಡಿಸೆಂಬರ್ ಅವಧಿಯಲ್ಲಿ ಒಟ್ಟು 700 ಪುಸ್ತಕಗಳನ್ನು ಉಚಿತವಾಗಿ ವಿತರಣೆ ಮಾಡಲಾಗಿದೆ.

# ನಿಮ್ಮಲ್ಲಿ ನಮ್ಮ ಮನವಿ

ಮಂಡ್ಯ ಜಿಲ್ಲಾ ಶಾಖೆಯ ಮುಖ್ಯಸ್ಥರಾಗಿ ಹುರುಗಲವಾಡಿ ರಾಮಯ್ಯ ಹೇಗೆ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಹಿಂದಿನ ಪುಟದಲ್ಲಿ ನೀವು ಗಮನಿಸಿದಿರಿ.

ಇದೇ ರೀತಿಯಲ್ಲಿ ವಿವಿಧ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಕೆಲಸ ಮಾಡಲು ಸ್ವಯಂಸೇವಕರು (ವಾಲಂಟೀರ್ಸ್) 'ಕರ್ನಾಟಕ ಸಮಾಜವಾದಿ ವೇದಿಕೆ'ಗೆ ಬೇಕು.

ನೀವು ಕೂಡ ಈ ವಿಷಯದಲ್ಲಿ ಮುಂದೆ ಬನ್ನಿ. ನೀವು ಮಾಡಬೇಕಿರುವುದು ಏನೆಂದರೆ,

● ನಾವು ನಿಮಗೆ ಕಳಿಸುವ ಪುಸ್ತಕಗಳನ್ನು ನೀವು, ನಿಮ್ಮ ಸುತ್ತಮುತ್ತ ಇರುವ ಇವರಿಗೆ ನೀಡಬಹುದು.

* ಶಾಲೆ/ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ,
* ಶಿಕ್ಷಕರಿಗೆ, ಉಪನ್ಯಾಸಕರುಗಳಿಗೆ, ಪ್ರಾಧ್ಯಾಪಕರುಗಳಿಗೆ,
* ವಕೀಲರುಗಳಿಗೆ, ಪತ್ರಕರ್ತರಿಗೆ
* ವಿವಿಧ ಕ್ಷೇತ್ರಗಳಲ್ಲಿದ್ದು ಪುಸ್ತಕಗಳನ್ನು ಓದಲು ಆಸಕ್ತಿ ಇರುವವರಿಗೆ

ವೈಚಾರಿಕತೆಯನ್ನು ಮೂಡಿಸಲು ನಿಮ್ಮ ಕಡೆಯಿಂದ ಸಾಧ್ಯ ಇರುವಷ್ಟು ಸಹಕಾರವನ್ನು ನೀವು ನೀಡಿ.

* * *

ಕೆಲವರು ನಮಗೆ 'ವೈಚಾರಿಕತೆಯನ್ನು ಬೆಳೆಸುವ ಕಿರುಪುಸ್ತಕಗಳನ್ನು ನೀವು ಉಚಿತವಾಗಿ ಹೇಗೆ ನೀಡುತ್ತೀರಿ? ಇದರಿಂದ ನಿಮಗೆ ನಷ್ಟ ಆಗುವುದಿಲ್ಲವೆ?' ಎಂದು ಕೇಳುತ್ತಾರೆ. ಇನ್ನೂ ಅನೇಕರ ಮನಸ್ಸಿನಲ್ಲಿ ಇಂಥ ಪ್ರಶ್ನೆ ಇರುತ್ತದೆ; ಸಂಕೋಚಪಟ್ಟು ಅವರು ಕೇಳುವುದಿಲ್ಲ.

ಈ ಪ್ರಶ್ನೆಗೆ ನಮ್ಮ ಉತ್ತರ ಸರಳವಾಗಿದೆ ಮತ್ತು . ಕರ್ನಾಟಕ ಸಮಾಜವಾದಿ ವೇದಿಕೆಗೆ ಗಾಡ್ ಫಾದರ್ ಯಾರೂ ಇಲ್ಲ. ನಮಗೆ ಅಂಥವರು ಬೇಕಾಗಿಲ್ಲ. 'ಕರ್ನಾಟಕ ಸಮಾಜ ವಾದಿ ವೇದಿಕೆ ಚಟುವಟಿಕೆ ಗಳನ್ನು ಗಮನಿಸಿ, ಅವುಗಳು ಸರಿ ಎನಿಸಿದರೆ, ದಯಮಾಡಿ ದಾನ/ ಸಹಾಯಧನ ನೀಡಿ' ಎಂದು ನಾವೇ ಮನವಿ ಮಾಡುತ್ತೇವೆ.

ಯಾವುದೇ ಕಂಡಿಷನ್ಸ್ ಇಲ್ಲದೆ ಯಾರು ದಾನಸಹಾಯ ಧನ ನೀಡುತ್ತಾರೊ, ಅದನ್ನು ಮಾತ್ರ ಸ್ವೀಕರಿಸುತ್ತೇವೆ. ಹೀಗೆ ಪಡೆದ ದಾನ/ಸಹಾಯಧನದಿಂದ ಕರ್ನಾಟಕ ಸಮಾಜವಾದಿ ವೇದಿಕೆಯ ಚಟುವಟಿಕೆ ಗಳನ್ನು ಕಳೆದ ಕೆಲವು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದೇವೆ.

ಪುಸ್ತಕಗಳನ್ನು ವಿದ್ಯಾರ್ಥಿ-ಯುವಜನರಲ್ಲಿ ಪ್ರಸಾರ ಮಾಡಲು ವಿದ್ಯಾರ್ಥಿ/ವಿದ್ಯಾರ್ಥಿನಿಯರೇ ಆಗಲಿ, ಯುವಜನರೇ ಆಗಲಿ, ಶಿಕ್ಷಕರೇ ಆಗಲಿ, ಉಪನ್ಯಾಸಕರೇ ಆಗಲಿ, ಪ್ರಾಧ್ಯಾಪಕರೇ ಆಗಲಿ, ವಕೀಲರೇ ಆಗಲಿ, ಒಟ್ಟಾರೆ ಯಾರೇ ಆಗಲಿ ಮುಂದೆ ಬರಬಹುದು.

ಒಟ್ಟಾರೆ, ನಾವು ಮತ್ತು ನೀವು ಎಲ್ಲರೂ ಸೇರಿ, ಈ ಸಮಾಜವನ್ನು ಆರೋಗ್ಯಕರವನ್ನಾಗಿ, ಹಿತಕರವನ್ನಾಗಿ ರೂಪಿಸೋಣ. ಇದುವೇ ಕರ್ನಾಟಕ ಸಮಾಜವಾದಿ ವೇದಿಕೆಯ ಗುರಿ.

ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ
https://karnatakasocialistforum.in

**ನಮ್ಮನ್ನು ಅರ್ಥಮಾಡಿಕೊಳ್ಳಿ**
**ನಮ್ಮನ್ನು ವಿಮರ್ಶೆ ಮಾಡಿ**
**ನಮಗೆ ಸಲಹೆಗಳನ್ನು ನೀಡಿ**
**ನಮ್ಮ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಿ.**

---

ಮೋಹನ ಕೊಂಡಜ್ಜಿ, ನಾಗರಾಜಮೂರ್ತಿ, ಪ್ರೊ|| ಎಂ. ನಾರಾಯಣ ಸ್ವಾಮಿ, ಪ್ರೊ|| ಹನುಮಂತ, ಆರ್.ಜಿ.ಹಳ್ಳಿ ನಾಗರಾಜ್, ಶೈಲೇಂದ್ರ ಬಂದಗದ್ದೆ, ಡಾ|| ಟಿ.ಎನ್. ಪ್ರಕಾಶ್, ಡಾ|| ಟಿ.ವಿ.ನಾಗರಾಜ್, ಮಹೇಶ್ ವೈ. ಮುಂತಾದವರನ್ನು ಸೇರಿಸಲಾಗಿದೆ. ಇವರಿಗೆ ಅಂಬಿಕಾ ಗೌಡ ಅವರು ಕಾಲ್ ಮಾಡಿ, ಸಮಾಜವಾದಿ ಚಟುವಟಿಕೆಗಳಿಗೆ ಬೆಂಬಲ ನೀಡಲು ಕೋರಿದ್ದರು. ಆದಾಗ್ಯೂ, ಈ ಗುಂಪಿನಲ್ಲಿ ಇರುವ ಹಿರಿಯ-ಕಿರಿಯ ಮಿತ್ರರು ಈ ವಿಷಯಕ್ಕೆ ಹೆಚ್ಚಿನ ಮಹತ್ವ ಮತ್ತು ಸಮಯ ನೀಡಿರುವುದು ಕಂಡು ಬರುವುದಿಲ್ಲ. ಬಹುಶ: ಅವರಿಗೆ ಸಮಯಾಭಾವ ಇದೆ ಎಂದೇ ಭಾವಿಸಿದ್ದು, ಈ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮುಂದುವರೆಸಲಾಗುವುದು.

ಡಿಸೆಂಬರ್ 4-5ರಂದು ಏರ್ಪಾಟಾಗಿದ್ದ 'ಸಮಾಜವಾದಿ ವಿಚಾರ ಶಿಬಿರ'ದ ಮಾಹಿತಿ ಗೊತ್ತಾದಾಗ, ಡಾ|| ಟಿ.ಎನ್. ಪ್ರಕಾಶ್ 'ಒಳ್ಳೆಯ ಪ್ರಯತ್ನ. ಯಶಸ್ವಿಯಾಗಲಿ' ಎಂದು ಶುಭ ಹಾರೈಸಿದರು.

'ಈ ವಾಟ್ಸ್ಯಾಪ್ ಗುಂಪಿನಲ್ಲಿ ಇರುವವರು ತಮ್ಮ ಮಕ್ಕಳನ್ನು, ಮೊಮ್ಮಕ್ಕಳನ್ನು ಶಿಬಿರಕ್ಕೆ ಕಳಿಸಿಕೊಡಬೇಕು ಎಂದು ಮಾಡಿಕೊಂಡ ವಿನಂತಿಗೆ ಉತ್ತಮ ಪ್ರತಿಕ್ರಿಯೆ ಬರಲಿಲ್ಲ.

ಹಿರಿಯರಾದ ಡಾ|| ವಿಜಯಾ, ಎಚ್.ಎಸ್.ಪುಷ್ಪಾ ಪ್ರೊ|| ಹನುಮಂತ ಮತ್ತಿತರರು ಪ್ರೋತ್ಸಾಹದ ಮಾತುಗಳನ್ನಾಡಿದ್ದಾರೆ.

ವಿದ್ಯಾರ್ಥಿ-ವಿದ್ಯಾರ್ಥಿನಿ-ಯುವಜನರಲ್ಲಿ ಸಮಾಜವಾದವನ್ನು ಪ್ರಸಾರ ಮಾಡುವ ಕಾರ್ಯಕ್ಕಾಗಿ ಉಳಿತಾಯ ಮಾಡುವ ಮನೋಭಾವ ಮೂಡಬೇಕೆಂಬ ದೃಷ್ಟಿಯಿಂದ 'ಸಮಾಜವಾದಿ ಫಂಡ್' ಎಂಬುದನ್ನು ಪ್ರಾರಂಭಿಸಿ, ಇದಕ್ಕೆ ಪ್ರತಿಯೊಬ್ಬರೂ ಪ್ರತಿ ತಿಂಗಳೂ ತಮಗೆ ಸಾಧ್ಯವಿರುವಷ್ಟು ಮೊತ್ತವನ್ನು ಹಾಕಬೇಕು ಎಂದು ನಿರ್ಣಯಿಸಲಾಯಿತು.

ಸಮಾಜವಾದಿ ವಿಚಾರ ಬೆಳೆಸಲಿಕ್ಕಾಗಿ ಸಹಾಯಧನ ನೀಡುವ ಪರಿಪಾಠವನ್ನು ಮೂಡಿಸುವುದು ಈ ಪ್ರಯತ್ನದ ಉದ್ದೇಶ. ಇದರಲ್ಲಿ ವಿದ್ಯಾರ್ಥಿಗಳು, ಯುವಜನರು, ನಿವೃತ್ತರು, ಸರ್ಕಾರಿ ಉದ್ಯೋಗಿಗಳು ಇದ್ದಾರೆ. ಹೆಚ್ಚು ಹಣ ಕೊಡದಿದ್ದರೂ, ತಮ್ಮ ಪಾಲಿನ ಕರ್ತವ್ಯ ನಿರ್ವಹಿಸಲು ಈ ಅವಕಾಶವನ್ನು ಒದಗಿಸಲಾಗಿದೆ.

ಇದಕ್ಕಾಗಿ **ಗೌರಿ** ಪಿ. ಇವರ ಹೆಸರಿನಲ್ಲಿ ಬ್ಯಾಂಕ್ ಖಾತೆಯನ್ನು ತೆರೆದು, ಅಲ್ಲಿಗೆ ಎಲ್ಲರೂ ಹಣವನ್ನು ಕಳಿಸಿಕೊಡಬೇಕೆಂದು ತಿಳಿಸಲಾಯಿತು. ಜುಲೈನಿಂದ ಡಿಸೆಂಬರ್ ವರೆಗೆ ಒಟ್ಟು 13 ಜನರು ಮಾಸಿಕ ರೂ. 50/- ರಷ್ಟು ಚಿಕ್ಕ ಮೊತ್ತವನ್ನು ಈ ಖಾತೆಯಲ್ಲಿ ಜಮಾ ಮಾಡಿದ್ದಾರೆ. ಇಲ್ಲಿ ಸಂಗ್ರಹವಾದ ಒಟ್ಟು ರೂ. 6600. ಇದು ಹೆಮ್ಮೆಯ ವಿಷಯ. ಇದು 2022ರಲ್ಲೂ ಮುಂದುವರೆಯಲಿದೆ.

ಇದಲ್ಲದೆ, 15ಕ್ಕೂ ಹೆಚ್ಚು ಜನರು ಎಂದಿನಂತೆ ಮಾಸಿಕ ಸಹಾಯ ಧನ ನೀಡುವುದನ್ನು ಮುಂದುವರೆಸಿದ್ದಾರೆ. ದೊರಕುವ ಸಹಾಯಧನದಲ್ಲಿ ವಿವಿಧ ರೀತಿಯ ಕಾರ್ಯಚಟುವಟಿಕೆಗಳನ್ನು ಕರ್ನಾಟಕ ಸಮಾಜವಾದಿ ವೇದಿಕೆ ನಡೆಸಿಕೊಂಡು ಬಂದಿದೆ.

ವೇದಿಕೆಯ ಚಟುವಟಿಕೆಗಳು ಪರಿಣಾಮಕಾರಿಯಾಗಿ ನಡೆಯಲು ಹೆಚ್ಚು ಜನರು ಸಮಯ ನೀಡುವ ಅವಶ್ಯಕತೆ ಕಾಣುತ್ತಿದೆ. ಸಮಯ ಕೊಡಲು ಸಾಧ್ಯ ಇರುವವರು ದಯಮಾಡಿ ಸಂಪರ್ಕಿಸಬೇಕಾಗಿ ಕೋರಿಕೆ.

ಸಮಾಜವಾದಿ ವಿಚಾರವನ್ನು ಒಳಗೊಂಡ ಕಿರುಪುಸ್ತಕಗಳನ್ನು ಮತ್ತು 'ಯುವ ಧ್ವನಿ' ಪತ್ರಿಕೆಯನ್ನು ಯುವ ಜನರಲ್ಲಿ ಮತ್ತು ಆಸಕ್ತರಲ್ಲಿ ಪ್ರಸಾರ ಮಾಡುವ ಕಾರ್ಯದಲ್ಲಿ ಎಲ್ಲಾ ಸಮಾಜವಾದಿ ಮಿತ್ರರು ತಮ್ಮನ್ನು ತೊಡಗಿಸಿಕೊಂಡರು. ಇದರಿಂದಾಗಿ ಅರ್ಧ ವರ್ಷದಲ್ಲಿ ಸಾವಿರಾರು ಕಿರು ಪುಸ್ತಕಗಳನ್ನು ಆಸಕ್ತಿರಿಗೆ ತಲುಪಿಸುವುದು ಸಾಧ್ಯವಾಯಿತು.

ರಾಯಚೂರಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಚೇರಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಾ ಅಲ್ಲಿ ಸಮಾಜವಾದಿ ವೇದಿಕೆಯ ಕೆಲಸ ಕಾರ್ಯಗಳಲ್ಲೂ ತೊಡಗಿರುವ **ಪದ್ಮಾ** ಅವರು ವಿವಾಹ ಆಗುತ್ತಿರುವುದು ತಿಳಿದು ಬಂದಾಗ, ಅವರಿಗೆ ಕಿಂಚಿತ್ ಆರ್ಥಿಕ ನೆರವನ್ನು ಒದಗಿಸಲು ಕರ್ನಾಟಕ ಸಮಾಜವಾದಿ ವೇದಿಕೆ ಪರವಾಗಿ ಮನವಿ ಮಾಡಿಕೊಳ್ಳಲಾಯಿತು. ಇದಕ್ಕೆ ಉಮಾಶಂಕರ್,


ಹೊಸ ತಲೆಮಾರಿನ ಒಳದನಿ

ಖಾಸಗಿ ಪ್ರಸಾರಕ್ಕಾಗಿ

ಯುವ ಧ್ವನಿ

ಸಂಪುಟ–1 ಸೂಚಿತ ಕೊಡುಗೆ ರೂ. 10/– ಸಂಚಿಕೆ–5 ಸೆಪ್ಟೆಂಬರ್ 2021

ಬೇಕೇ ಬೇಕು ಯುವಜನರಿಗಾಗಿ ವಿಶೇಷ ಗ್ರಾಮಸಭೆ

ಅನಂತ್, ಪಿ. ನಾಗರಾಜ್, ಸುಷ್ಮಿತಾ, ರಾಮಮನೋಹರ, ಸುಪ್ರೀತಾ, ಮಂಗ್ಳೂರ ವಿಜಯ, ಗೋವರ್ಧನ್ ಸ್ಪಂದಿಸಿದರು. ಇವರಿಂದ ಸಂಗ್ರಹವಾದ ಒಟ್ಟು ಧನಸಹಾಯ ರೂ. 4902/–. ಇದನ್ನು ಪದ್ಮಾ ಅವರಿಗೆ ತಲುಪಿಸಲಾಯಿತು.

ಕರ್ನಾಟಕ ಸಮಾಜವಾದಿ ವೇದಿಕೆ ಜೊತೆಗೆ ನಿರಂತರವಾಗಿ ಕೆಲಸ ಮಾಡುತ್ತಾ ಬಂದ ಕೆಲವು ಯುವಜನರು ತಮ್ಮ ಸಂಪರ್ಕದಲ್ಲಿ ಕನ್ನಡ ಬಾರದ ಯುವಜನರು ಇರುವುದಾಗಿ, ಅವರನ್ನು ತೊಡಗಿಸಿಕೊಳ್ಳಲು ಇಂಗ್ಲೀಷಿನಲ್ಲಿ **'ವಾಯ್ಸ್ ಆಫ್ ಯೂಥ್'** ಎಂಬ ಆನ್‌ಲೈನ್ ಪತ್ರಿಕೆಯನ್ನು ಮಾಡಲು ಬಯಸಿದರು. ಅವರಿಗೆ ಬೆಂಬಲ ನೀಡಲಾಯಿತು.

ಸುಮಾರು ಒಂದೂವರೆ ವರ್ಷದಿಂದ ನಡೆಸಿಕೊಂಡು ಬರಲಾದ ಗೂಗಲ್ ಮೀಟ್‌ಗಳ ಮೂಲಕ ಕರ್ನಾಟಕ ಸಮಾಜವಾದಿ ವೇದಿಕೆಗೆ ನೂರಾರು ವಿದ್ಯಾರ್ಥಿಗಳು ಮತ್ತು ಯುವಜನರು ಪರಿಚಯವಾದರು. ಇವರಿಗೆ ಸಮಾಜದ ವಿವಿಧ ಮುಖಗಳನ್ನು ವಿವರವಾಗಿ ತಿಳಿಸಿ ಕೊಡಲಾಯಿತು. ಸಮಾಜದಲ್ಲಿ ನಾವು ಹೇಗೆ ಮಧ್ಯಪ್ರವೇಶ ಮಾಡಲು ಸಾಧ್ಯ ಇದೆ ಎಂಬುದನ್ನು ಮನವರಿಕೆ ಮಾಡಿಕೊಡಲಾಯಿತು.

ಈ ಪ್ರಯತ್ನವು ನೂರಾರು ವಿದ್ಯಾರ್ಥಿ ಯುವಜನರಲ್ಲಿ ಚಿಂತನೆ ಮೂಡಿಸಿದ್ದು ನಿಜ.

ಈ ಹಿನ್ನೆಲೆಯಲ್ಲಿ, ಕೆಲಕಾಲ ಸ್ಥಗಿತಗೊಂಡಿದ್ದ ಗೂಗಲ್ ಮೀಟ್ ಸಭೆಯನ್ನು 'ಪುನ: ಪ್ರಾರಂಭಿಸಿ' ಎಂದು ಹಲವಾರು ಮಿತ್ರರು ಕೇಳಿಕೊಂಡ ಹಿನ್ನೆಲೆಯಲ್ಲಿ,

ಮೊದಲು ಪ್ರತಿ ಬುಧವಾರ ನಡೆಯಲಾರಂಭಿಸಿದ ಗೂಗಲ್ ಮೀಟ್ ಮುಂದೆ ಪ್ರತಿದಿನ ನಡೆಯಲು ಶುರುವಾಯಿತು.

* * *


ಇದುವರೆಗೆ ನಡೆದ ಗೂಗಲ್ ಮೀಟ್ ಸಭೆಗಳ ಬಗ್ಗೆ ಮಾಹಿತಿ ಮುಂದಿನ ಪುಟಗಳಲ್ಲಿ ಇದೆ.

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಗಿಡದಾಗಲಹಳ್ಳಿ ಗ್ರಾಮದ ಭೂತರಾಜ್ ಅವರು, ಗೂಗಲ್ ಮೀಟ್ ಸಭೆಯಲ್ಲಿ **'ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ'** ವಿಷಯ ತಿಳಿಸುತ್ತಾ, ಮಾಹಿತಿಯೊಂದನ್ನು (ಕೆಳಗಿನ ಬಾಕ್ಸ್ ನೋಡಿ) ಹಂಚಿಕೊಂಡರು. ಆಗ, 'ಆ ವಿಷಯ ಕುರಿತು ಇತರ ಸದಸ್ಯರೂ ಕ್ರಿಯಾಶೀಲರಾಗಬೇಕು' ಎಂದು ತಿಳಿಸಲಾಯಿತು.

## ಭೂತರಾಜು ಅವರ ಮನವಿ

ಭೂತರಾಜು ಮಧುಗಿರಿ ಉಪವಿಭಾಗಾಧಿಕಾರಿ ಅವರಿಗೆ 'ಕವಣದಾಲ, ತೋವಿನಕೆರೆ ಮತ್ತು ಬಡವನಹಳ್ಳಿ ಗ್ರಾಮ ಪಂಚಾಯತಿಗಳಲ್ಲಿ ನಡೆದ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯಲ್ಲಿ ಭಾಗವಹಿಸಿರುತ್ತೇನೆ. ಅಲ್ಲಿ ಮಕ್ಕಳು ಸಲ್ಲಿಸಿದ ಅಹವಾಲುಗಳನ್ನು ಆಲಿಸಿರುತ್ತೇನೆ ಮತ್ತು ಅದನ್ನು ಪಿಡಿಒ ದಾಖಲಿಸಿರುವ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ಮೂರೂ ಪಂಚಾಯತ್‌ಗಳಲ್ಲಿ ನಡೆದ ಸಭೆಗಳಲ್ಲಿ ಒಟ್ಟು 57 ಮಕ್ಕಳು ತಮ್ಮ ಕುಟುಂಬಕ್ಕೆ ನಿವೇಶನ ಅಥವಾ ಮನೆ ಇಲ್ಲದೆ ಇರುವುದನ್ನು ಗಮನಕ್ಕೆ ತಂದು, ತಮ್ಮ ಕುಟುಂಬಕ್ಕೆ ನಿವೇಶನ ಅಥವಾ ಮನೆ ನೀಡುವಂತೆ ಕೋರಿರುತ್ತಾರೆ'. ಇದನ್ನು ತಮ್ಮ ಗಮನಕ್ಕೆ ತರುತ್ತಾ, ಈ ಕುರಿತು ವಿಶೇಷ ಕ್ರಮವಹಿಸುವಂತೆ ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ' ಎಂದು ಅರ್ಜಿ ಸಲ್ಲಿಸಿದರು.

ಇದಕ್ಕೆ ಸ್ಪಂದಿಸಿದ ಮಧುಗಿರಿ ಉಪವಿಭಾಗಾಧಿಕಾರಿಯವರು ಮೇಲಿನ ಎರಡೂ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಹಣಾಧಿಕಾರಿಗಳಿಗೆ ಪತ್ರ (ಸಂಖ್ಯೆ ಎಲ್.ಎನ್.ಡಿ.ಸಿ.ಆರ್.69/2021–22 ದಿ. 6–4–2021) ಬರೆದು, ಮಕ್ಕಳ ಅಹವಾಲನ್ನು ಪರಿಶೀಲಿಸಿ, ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.


ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ಉಪವಿಭಾಗಾಧಿಕಾರಿಗಳವರ ಕಾರ್ಯಾಲಯ, ಮಧುಗಿರಿ ಉಪ ವಿಭಾಗ, ಮಧುಗಿರಿ.

ಕಛೇರಿ : 08137-295533, ಫ್ಯಾಕ್ಸ್ : 08137-282018

ನಂ: ಎಲ್‌ಎನ್‌ಡಿ ಸಿಆರ್69 /2021-22 ದಿನಾಂಕ: 6-04-2021

ತಹಶೀಲ್ದಾರ್
ಮಧುಗಿರಿ/ ಕೊರಟಗೆರೆ ತಾಲ್ಲೂಕು

ಕಾರ್ಯನಿರ್ವಹಣಾಧಿಕಾರಿಗಳು
ತಾಲ್ಲೂಕು ಪಂಚಾಯಿತಿ
ಮಧುಗಿರಿ/ ಕೊರಟಗೆರೆ.
-ರವರಿಗೆ.

ಮಾನ್ಯರೆ,

ವಿಷಯ:- ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಯಲ್ಲಿ ನಿವೇಶನ ಮತ್ತು ವಸತಿ ಕೋರಿರುವ ಮಕ್ಕಳಗೆ ಪರಿಹಾರ ಕಲ್ಪಿಸಲು ಕೋರಿರುವ ಬಗ್ಗೆ.

ಉಲ್ಲೇಖ:- ಶ್ರೀ ಭೂತರಾಜು ಜಿ.ಪಿ. ಗಿಡದಾಗಲಹಳ್ಳಿ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು ಇವರ ಮನವಿ ದಿನಾಂಕ: 30-03-2021.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಭೂತರಾಜು ಜಿ.ಪಿ, ಗಿಡದಾಗಲಹಳ್ಳಿ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು ಇವರು ಉಲ್ಲೇಖದ ರೀತ್ಯಾ ಈ ಕಛೇರಿಗೆ ಮನವಿ ಸಲ್ಲಿಸಿ ತಾವು ಕವಣದಾಲ, ತೋವಿನಕೆರೆ ಮತ್ತು ಬಡವನಹಳ್ಳಿ ಗ್ರಾಮ ಪಂಚಾಯಿತಿಗಳಲ್ಲಿ ಅವರ ಸಹಕಾರದೊಂದಿಗೆ ನಡೆಯುವ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತಿದ್ದು, ಸದರಿ ಸಭೆಗಳಲ್ಲಿ 57 ಜನ ಮಕ್ಕಳು ನಿವೇಶನ ಮತ್ತು ವಸತಿ ಕೋರಿರುತ್ತಾರೆ. ಸದರಿ ಪಟ್ಟಿಯನ್ನು ಲಗತ್ತಿಸಿ ಮಕ್ಕಳ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಿಕೊಡಬೇಕೆಂದು ಕೋರಿರುತ್ತಾರೆ.

ಉಲ್ಲೇಖಿತ ಮನವಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ ಮನವಿಯಲ್ಲಿನ ಅಂಶಗಳ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

ನಿಮ್ಮ ವಿಶ್ವಾಸಿ

ತಹಶೀಲ್ದಾರ್-ಗ್ರೇಡ್-2
ಉಪವಿಭಾಗಾಧಿಕಾರಿಗಳ ಕಛೇರಿ
ಮಧುಗಿರಿ ಉಪವಿಭಾಗ, ಮಧುಗಿರಿ.


ಪ್ರತಿಯನ್ನು:
1) ಶ್ರೀ ಭೂತರಾಜು ಜಿ.ಪಿ, ಗಿಡದಾಗಲಹಳ್ಳಿ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.

# ನಿರಂತರವಾಗಿ ನಡೆದ ಗೂಗಲ್ ಮೀಟ್ ಸಭೆಗಳು ಆಗಸ್ಟ್ ತಿಂಗಳು



ಪವಿತ್ರ ಬಿ.

**ಆಗಸ್ಟ್ 18ರಂದು** 'ಗ್ರಾಮೀಣ ಪರಿಸರದಲ್ಲಿ ಅಸ್ಪೃಶ್ಯತೆಯ ನೆಲೆಗಳು' ಎಂಬ ವಿಷಯ ಕುರಿತು ಹಂಪಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ. ಮಾಡುತ್ತಿರುವ **ಪವಿತ್ರ ಬಿ.** ಮಾತನಾಡಿದರು.




ದೇಶದ ಮೊದಲನೇ ಹಿಂದುಳಿದ ಆಯೋಗದ ಅಧ್ಯಕ್ಷರಾಗಿದ್ದ ಕಾಕಾ ಕಾಲೇಲ್ಕರ್




ದೇಶದ ಎರಡನೇ ಹಿಂದುಳಿದ ಆಯೋಗದ ಅಧ್ಯಕ್ಷರಾಗಿದ್ದ ಬಿ. ಪಿ. ಮಂಡಲ್

**ಆಗಸ್ಟ್ 19ರಂದು** ಗುರುವಾರ ಸಂಜೆ 7 ಗಂಟೆಗೆ ನಡೆದ ಗೂಗಲ್ ಮೀಟ್‌ಗೆ ಇಬ್ಬರು ಮಹತ್ವದ ವ್ಯಕ್ತಿಗಳನ್ನು ಪರಿಚಯಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿತ್ತು. ಅವರ ಫೋಟೋಗಳನ್ನು ವಾಟ್ಸ್ಯಾಪ್ ಗುಂಪಿನಲ್ಲಿ ಹಾಕಿ, ಅವರನ್ನು ಗುರುತಿಸಲು ಸದಸ್ಯರುಗಳಿಗೆ ತಿಳಿಸಲಾಗಿತ್ತು. ಕೆಲವರು ಇಬ್ಬರೂ ವ್ಯಕ್ತಿಗಳನ್ನು ಗುರುತಿಸಿದರು. ಅದೇ ದಿನ ಸಂಜೆ, ಭಾರತದಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಈ ಇಬ್ಬರೂ ಮಹನೀಯರು ನೀಡಿದ ಕೊಡುಗೆ ಕುರಿತು ವಿವರವಾಗಿ ಚರ್ಚಿಸಲಾಯಿತು.



**ಆಗಸ್ಟ್ 20ರಂದು** ಕರ್ನಾಟಕದ ಹಿಂದುಳಿದ ವರ್ಗಗಳಿಗೆ ಧ್ವನಿ ಮತ್ತು ಶಕ್ತಿ ನೀಡಿದ ಡಿ.ದೇವರಾಜ ಅರಸು ಜನ್ಮದಿನ. ಅವರ ಬಗ್ಗೆ ಸದಸ್ಯರುಗಳೊಂದಿಗೆ ಅವರ ಕೊಡುಗೆಯ ಬಗ್ಗೆ ಚರ್ಚಿಸಲಾಯಿತು.



ಶ್ರೇಷ್ಠ ಸಮಾಜ ಸುಧಾರಕ ಶ್ರೀ ನಾರಾಯಣ ಗುರು

**ಆಗಸ್ಟ್ 23ರಂದು** ಶ್ರೇಷ್ಠ ಸಮಾಜ ಸುಧಾರಕರಲ್ಲಿ ಒಬ್ಬರಾದ ನಾರಾಯಣ ಗುರು ಅವರ ಬಗ್ಗೆ ಗೂಗಲ್ ಮೀಟ್‌ನಲ್ಲಿ ವಿಚಾರವನ್ನು ಹಂಚಿಕೊಳ್ಳಲಾಯಿತು.

ಒಂದು ಜಾತಿ, ಒಂದು ಧರ್ಮ ಮತ್ತು ಒಂದು ದೇವರು ಎಂಬ ಪರಿಕಲ್ಪನೆಯನ್ನು ಸಮಾಜದ ಮುಂದೆ ಇಟ್ಟು, ಸಮಾಜದಲ್ಲಿ ಸಮಾನತೆ ಮತ್ತು ಮಾನವತೆಯನ್ನು ಸ್ಥಾಪಿಸಲು ಶ್ರಮಿಸಿದ ನಾರಾಯಣ ಗುರು ಎಲ್ಲರಿಗೂ ಮಾರ್ಗದರ್ಶಿ, ಪ್ರೇರಣಾಶಕ್ತಿ ಆಗಿದ್ದಾರೆ ಎಂಬುದನ್ನು ಮನಗಾಣಿಸಿ ಕೊಡಲಾಯಿತು.

ಸಮಾಜ ಸುಧಾರಕರ ಸಂದೇಶವನ್ನು ಎಲ್ಲರಿಗೆ ತಲುಪಿಸುವ ಹೊಣೆಯನ್ನು ನಾವೆಲ್ಲ ಹೊತ್ತುಕೊಳ್ಳುವುದು ಮುಖ್ಯ ಎಂಬುದನ್ನು ಮನಗಾಣಲಾಯಿತು.



ಉಪನ್ಯಾಸಕ ಬಿ. ರಾಜಪ್ಪ

ಆಗಸ್ಟ್ 24ರಂದು ತುಮಕೂರು ಜಿಲ್ಲೆಯ ಉಪನ್ಯಾಸಕರಾದ **ಬಿ. ರಾಜಪ್ಪ** ಇವರು 'ನನ್ನ ಬದುಕಿನ ಕೆಲವು ಸಂದರ್ಭಗಳು' ಎಂಬ ವಿಷಯ ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು.

ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯ ಸಮುದಾಯದ ವಿದ್ಯಾವಂತರು ಕೂಡ ಏನೆಲ್ಲಾ ಕ್ಲಿಷ್ಟಕರ ಸಂದರ್ಭಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂಬುದನ್ನು ಅವರು ವಿವರಿಸಿದ್ದು ಮನಸಿಗೆ ನಾಟುವಂತಿತ್ತು.

ತಮ್ಮ ಜಮೀನಿಗೆ ಕೂಲಿ ಮಾಡಲು ಬಂದ ಬಡವರೂ ತಾವು ತಂದ ಹೋಟೆಲ್ ಊಟ ಸ್ವೀಕರಿಸಲಿಲ್ಲ ಎಂಬುದನ್ನು ಅವರು ಹೇಳಿದ್ದು ಹೃದಯ ಕಲಕಿತು.



ಮಹಾರಾಷ್ಟ್ರದ ಸಮಾಜವಾದಿ ಧುರೀಣ ಡಾ॥ ನರೇಂದ್ರ ಧಾಬೋಳ್ಕರ್

**ಆಗಸ್ಟ್ 20, 2013ರಲ್ಲಿ** ಮಹಾರಾಷ್ಟ್ರದ ಸಮಾಜವಾದಿ ಚಿಂತಕ ಮತ್ತು ಮೂಢನಂಬಿಕೆಗಳ ವಿರುದ್ಧ ಜೀವನವಿಡೀ ಹೋರಾಟ ಮಾಡಿದ ಡಾ॥ ನರೇಂದ್ರ ಧಾಬೋಳ್ಕರ್ ಕೊಲೆಯಾದ ದಿನ. ಅವರ ಬಗ್ಗೆ ಹಿರಿಯ ಪತ್ರಕರ್ತ **ಸನತ್ ಕುಮಾರ್ ಬೆಳಗಲಿ** ಬರೆದಿದ್ದ ಲೇಖನವೊಂದರ ಸಾರವನ್ನು ತಿಳಿಸಲಾಯಿತು.

'ಧಾಬೋಳ್ಕರ್ ಜೀವನ ಮತ್ತು ಸಾಧನೆ ತಿಳಿಸುವ ಪುಸ್ತಕ ಕನ್ನಡದಲ್ಲಿ ಇದೆಯೆ?' ಎಂದು ಅಲ್ಲಲ್ಲಿ ವಿಚಾರಿಸಿದಾಗ, ಇಲ್ಲ ಎಂಬ ಉತ್ತರ ದೊರಕಿತು. ಈ ಕುರಿತು ಕಿರುಪುಸ್ತಕವೊಂದನ್ನು ಸಿದ್ಧಪಡಿಸಿ, ಪ್ರಕಟಿಸುವುದು ಸೂಕ್ತ ಎಂಬ ಅಭಿಪ್ರಾಯ ಮೂಡಿತು.



**ಮುಖ್ಯಮಂತ್ರಿಯವರ ಗೃಹ ಕಚೇರಿ**

ಶುಕ್ರವಾರ **ಆಗಸ್ಟ್ 27ರಂದು** ರಂದು ಮಂಗ್ಳೂರ ವಿಜಯ, ತಾವು ಮುಖ್ಯಮಂತ್ರಿಯವರ ಗೃಹಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಕಾಲದ ಅನುಭವವನ್ನು, ಮತ್ತು ಎದುರಿಸಿದ ಕೆಲವು ರಾಜಕೀಯ ಸಂದರ್ಭಗಳನ್ನು ತಿಳಿಸಿದರು.

**'ದಲಿತ ಮಹಿಳೆಯರ ಸ್ಥಿತಿಗತಿ'** ಕುರಿತು ಗೂಗಲ್ ಮೀಟ್




**ಆಗಸ್ಟ್ 24ರಂದು** 'ದಲಿತ ಮಹಿಳೆಯರ ಸ್ಥಿತಿಗತಿ' ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

ಕರ್ನಾಟಕದಲ್ಲಿ ಬಲಿಷ್ಠ ದಲಿತ ಚಳವಳಿ ಇದ್ದಾಗ್ಯೂ, ದಲಿತ ಮಹಿಳಾ ಮುಖಂಡರನ್ನು ಕಾಣಲಾಗುತ್ತಿಲ್ಲ ಎಂಬ ಬಗ್ಗೆ ಚರ್ಚಿಸಲಾಯಿತು.

**ಆಗಸ್ಟ್ 25ರಂದು** ಅಂಬೇಡ್ಕರ್‌ವಾದಿ, ದಲಿತ–ಬಹುಜನ ತತ್ವ ಮತ್ತು ಚಳವಳಿಗೆ ಗೇಲ್ ಓಂವೆಡ್ಟ್ ಅವರು ನೀಡಿದ ಕೊಡುಗೆ ಬಗ್ಗೆ ತಿಳಿದುಕೊಳ್ಳಲಾಯಿತು.

ಭಾರತದಲ್ಲಿ ಮಹಿಳೆಯರನ್ನು ಶೋಷಿಸುತ್ತಾ ಬಂದ ವ್ಯವಸ್ಥೆಯ ವಿರುದ್ಧ ನಡೆದ ಹೋರಾಟದ ಮಹತ್ವದ ಘಟ್ಟ ರಾಜಸ್ತಾನದ ಭನ್ವಾರಿ ದೇವಿ ಪ್ರಕರಣ.

ಈ ಬಗ್ಗೆ **ಆಗಸ್ಟ್ 28ರಂದು** ಚರ್ಚಿಸಲಾಯಿತು. ಈ ಪರಿಣಾಮವಾಗಿ ಬಂದ **'ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕಳ ಕಾಯ್ದೆ'** ಕುರಿತೂ ಮಾಹಿತಿ ಹಂಚಿಕೊಳ್ಳಲಾಯಿತು. ಈ ಕುರಿತು ಇರುವ ಸರ್ಕಾರಿ ವರದಿಗಳನ್ನು ಪಡೆದುಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯಪಡಲಾಯಿತು.



**ದಿನೇಶ್ ಬಿ.ಎಸ್.**

ದೇಶದ ಆದಿವಾಸಿಗಳ ಮಹೋನ್ನತ ನಾಯಕ ಬಿರ್ಸಾ ಮುಂಡಾ ಕುರಿತು **ಆಗಸ್ಟ್ 31ರಂದು** ಗೂಗಲ್ ಮೀಟ್ ಸಭೆಯಲ್ಲಿ ದಿನೇಶ್ ಬಿ.ಎಸ್. (ಮಡಿಕೇರಿ ಕೋರ್ಟಿನಲ್ಲಿ ಉದ್ಯೋಗಿ) ಮಾತನಾಡಿದರು. ಆದಿವಾಸಿಗಳು ಈಗಲೂ ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಅವರು ವಿವರಿಸಿದರು. ಆದಿವಾಸಿಗಳು ಮತ್ತು ಎಲ್ಲಾ ಶೋಷಿತರು ಒಗ್ಗೂಡಿ ಹೋರಾಟ ಮಾಡುವುದು ಅವಶ್ಯ ಎಂದು ತಿಳಿಸಿದರು.

ಈ ಸಭೆಯಿಂದ, ಕರ್ನಾಟಕ ಸಮಾಜವಾದಿ ವೇದಿಕೆ ವ್ಯಾಪ್ತಿಗೆ ನವೀನ್ ಸದಾ, ಕೃಷ್ಣಮೂರ್ತಿ ಇರುಳಿಗ, ಹಂಪಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದಿರುವ ಡಾ॥ ರತ್ನಮ್ಮ, ಐಎಎಸ್ ಪರೀಕ್ಷೆ ಬರೆಯಲು ತರಬೇತಿ ಪಡೆಯುತ್ತಿರುವ ಸೌಮ್ಯ ಮುಂತಾಗಿ ಹಲವು ಆದಿವಾಸಿ ಯುವಜನರು ಒಗ್ಗೂಡಿದರು.



**ಭನ್ವಾರಿ ದೇವಿ**

# ಸೆಪ್ಟೆಂಬರ್ ತಿಂಗಳ ಗೂಗಲ್ ಮೀಟ್ ಸಭೆಗಳು

**ಸೆಪ್ಟೆಂಬರ್ 1ರ ಬುಧವಾರ** ಗೂಗಲ್ ಮೀಟ್ ಸಭೆಯಲ್ಲಿ ಮಂಗ್ಳೂರ ವಿಜಯ, 'ದಲಿತರ ಮೇಲಿನ ದೌರ್ಜನ್ಯಗಳ ತಡೆ ಪರಿಶೀಲನಾ ಸಮಿತಿ ಅಧ್ಯಕ್ಷರಾದ ಮುಖ್ಯಮಂತ್ರಿಯವರು ಸೋಲುತ್ತಿರುವುದು ಎಲ್ಲಿ?' ಎಂಬ ವಿಷಯ ಕುರಿತು ಮಾತನಾಡಿದರು.

ಪಿಓಎ 1989ರ ಕಾಯ್ದೆ ಜಾರಿ ಬಗ್ಗೆ ಏಕೆ ನಿರ್ಲಕ್ಷ್ಯ ತೋರಲಾಗುತ್ತಿದೆ? ಈ ಕಾಯ್ದೆ ಪ್ರಕಾರ ಅವರು ಏಕೆ ಸಭೆಗಳನ್ನು ನಡೆಸುತ್ತಿಲ್ಲ? ದೌರ್ಜನ್ಯ ಪ್ರಕರಣಗಳಲ್ಲಿನ ಆರೋಪಿಗಳು ಏಕೆ ಖುಲಾಸೆ ಆಗುತ್ತಿದ್ದಾರೆ? ಎಂಬುದನ್ನು ವಿವರಿಸಿದ ಅವರು ಈ ಕುರಿತು ದಲಿತ ಮತ್ತು ಎಲ್ಲಾ ಸಂವಿಧಾನಪರ ಸಂಘಟನೆಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಬೇಕು ಎಂದು ಕಳಕಳಿಯಿಂದ ತಿಳಿಸಿದರು.



**ಪಾರ್ಥಸಾರಥಿ**

**ಸೆಪ್ಟೆಂಬರ್ 2ರಂದು** ತುಮಕೂರು ಜಿಲ್ಲೆಯಲ್ಲಿ ವಾಸವಾಗಿರುವ ದಲಿತ ಚಳವಳಿಯಲ್ಲಿ 30ಕ್ಕೂ ಹೆಚ್ಚು ವರ್ಷಗಳ ಕಾಲ ಶ್ರಮಿಸಿರುವ ಪಾರ್ಥಸಾರಥಿ, 'ಸುಳ್ಳು ಜಾತಿ ಪ್ರಮಾಣಪತ್ರಗಳ ಪಿಡುಗು' ವಿಷಯ ಕುರಿತು ವಿಚಾರಗಳನ್ನು ಹಂಚಿಕೊಂಡರು.

ಲಿಂಗಾಯತರು, ಬ್ರಾಹ್ಮಣರು, ಹಿಂದುಳಿದವರು ಹೇಗೆ ಸುಳ್ಳು ಜಾತಿ ಪ್ರಮಾಣಪತ್ರಗಳನ್ನು ಪಡೆದು, ಅದರ ಬಲದಲ್ಲಿ ಸರ್ಕಾರಿ ಹುದ್ದೆ ಮತ್ತು ಶೈಕ್ಷಣಿಕ ಸೀಟುಗಳನ್ನು ಗಿಟ್ಟಿಸಿಕೊಂಡಿದ್ದಾರೆ ಎಂಬುದನ್ನು ತಿಳಿಸಿದರು.

ಕರ್ನಾಟಕ ಸಮಾಜವಾದಿ ವೇದಿಕೆ ಮೂಲಕ ಕೂಡ ಈ ಬಗ್ಗೆ ನಿಶ್ಚಿತ ಕೆಲಸ ಮಾಡುವ ಸಲಹೆ ಬಂದಿತು. ಈ ನಿಟ್ಟಿನಲ್ಲಿ ಕೆಲಸ ಆಗುತ್ತಿದೆ. ಆಸಕ್ತರು ಸಂಪರ್ಕಿಸಿ.




**ಮಂಜುನಾಥಸ್ವಾಮಿ**

**ಸೆಪ್ಟೆಂಬರ್ 3ರಂದು** ಚಿಕ್ಕಮಗಳೂರಿನ ಕೆಜೆವಿಎಸ್ ಮುಖಂಡರಾದ ಮಂಜುನಾಥ ಸ್ವಾಮಿ ಡಿ.ಎಂ. 'ಗ್ರಾಮೀಣ ಬದುಕು: ಮುಖ್ಯ ಸವಾಲುಗಳು' ಎಂಬ ವಿಷಯ ಕುರಿತು ತಮ್ಮ ಅನುಭವ ಹಂಚಿಕೊಂಡರು.

ಗ್ರಾಮೀಣ ಜನರು ಮತ್ತು ಯುವಜನರು ಮುಖಾಮುಖಿಯಾಗಬೇಕಿರುವ ವಾಸ್ತವವನ್ನು ಮನವರಿಕೆ ಮಾಡಿಕೊಟ್ಟ ಅವರು, ಭಾರತದ ನಿಜ ಅಭಿವೃದ್ಧಿ ಆಗಬೇಕೆಂದರೆ, ಗ್ರಾಮೀಣ ವ್ಯವಸ್ಥೆಯನ್ನು ಸಹ್ಯವಾಗಿಸಬೇಕು ಎಂದು ಅಭಿಪ್ರಾಯಪಟ್ಟು, ವಿಶೇಷ ವಿಷಯವನ್ನು ಅವರು ಅರ್ಥಮಾಡಿಸಿಕೊಟ್ಟರು.

**ಸೆಪ್ಟೆಂಬರ್ 4ರಂದು** 'ಮಾನವ ಬಂಧುತ್ವ ವೇದಿಕೆ' ವತಿಯಿಂದ 'ಜಾತಿವಾರು ಆರ್ಥಿಕ–ಸಾಮಾಜಿಕ ಸಮೀಕ್ಷೆ ಮತ್ತು ಸಾಮಾಜಿಕ ನ್ಯಾಯ' ಎಂಬ ವಿಷಯ ಕುರಿತು ವೆಬಿನಾರ್ ಸಂಘಟಿಸಲ್ಪಟ್ಟಿತು.

ಕರ್ನಾಟಕ ಸಮಾಜವಾದಿ ವೇದಿಕೆಯ ಎಲ್ಲಾ ಮಿತ್ರರು ಆ ಸಭೆಗೆ ಹಾಜರಾಗುವಂತೆ ತಿಳಿಸಲಾಯಿತು.



**ನ್ಯಾ. ಮಹಾದೇವ ರಾನಡೆ**

**ಶುಕ್ರವಾರ ಸೆಪ್ಟೆಂಬರ್ 10ರಂದು** 'ಹಿಂದೂ ಸನಾತನಿ ಶಕ್ತಿ ವಿರುದ್ಧ ನಿಂತ ತಂಡದ ಧ್ವನಿ ನ್ಯಾ. ಮಹಾದೇವ ರಾನಡೆ ಜೀವನ' ಕುರಿತು ಕರ್ನಾಟಕ ಸಮಾಜವಾದಿ ವೇದಿಕೆ ಸದಸ್ಯ ಅನಂತ ಪದ್ಮನಾಭ ಮಾತನಾಡಿದರು.

ಈ ತಂಡದ ಶಕ್ತಿ ಮತ್ತು ಕೊರತೆಗಳನ್ನು ಡಾ॥ ಅಂಬೇಡ್ಕರ್ ತಿಳಿಸಿದ್ದನ್ನೂ ಈ ಸಂದರ್ಭದಲ್ಲಿ ಅರಿತುಕೊಂಡು, ಚರ್ಚೆಗೆ ಗುರಿಪಡಿಸಲಾಯಿತು.

**ಸೆಪ್ಟೆಂಬರ್ 6ರಂದು** 'ಮಹಿಳಾ ಮತ್ತು ಮಕ್ಕಳ ಇಲಾಖೆ ಜಾರಿ ಮಾಡುತ್ತಿರುವ ಯೋಜನೆಗಳು' ವಿಷಯ ಕುರಿತು ಚರ್ಚಿಸಲಾಯಿತು.

2019–20ನೇ ಸಾಲಿನ ಇಲಾಖಾ ವಾರ್ಷಿಕ ವರದಿಯಲ್ಲಿನ ಕೆಲವು ಅಂಶಗಳನ್ನು ಮುಂದಿಟ್ಟುಕೊಂಡು ಇಲಾಖೆಯ ಯೋಜನೆಗಳು ಸರಿಯಾಗಿ ಜನರಿಗೆ ಮುಟ್ಟುವ ಅವಶ್ಯಕತೆ ಇದೆ, ಈ ವಿಷಯದಲ್ಲಿ ನಾವು ಕೂಡ ನಮ್ಮನ್ನು ತೊಡಗಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಲಾಯಿತು.




**ಸೆಪ್ಟೆಂಬರ್ 8ರಂದು** ಬಹುತ್ವ ವೇದಿಕೆ ಮತ್ತು ಕರ್ನಾಟಕ ಸಮಾಜವಾದಿ ವೇದಿಕೆ ಜಂಟಿ ಸಭೆಯಲ್ಲಿ 'ತತ್ವ ಪದ ಸಾಹಿತ್ಯದಲ್ಲಿ ಬಹುತ್ವದ ಪರಿಕಲ್ಪನೆ' ವಿಷಯ ಕುರಿತು, ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಮಾಡುತ್ತಿರುವ ಸಂಗನಗೌಡ ಹಿರೇಗೌಡ ಮಾತನಾಡಿದರು.

**ಸೆಪ್ಟೆಂಬರ್ 9ರಂದು** 'ಅಂಚಿಗೆ ತಳ್ಳಲ್ಪಟ್ಟ ದಲಿತ ಮಹಿಳೆಯರ ಬದುಕು' ಎಂಬ ವಿಷಯ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

**ಸೆಪ್ಟೆಂಬರ್ 13ರಂದು** 'ಬಂಡವಾಳಶಾಹಿ, ಕಮ್ಯುನಿಸಂ ಮತ್ತು ಸೋಷಲಿಸಂ' ಕುರಿತು ಅರ್ಥಪೂರ್ಣ ಚರ್ಚೆ ನಡೆಸಲಾಯಿತು.

ಮೊದಲು ಈ ಮೂರರ ಅರ್ಥ ತಿಳಿದುಕೊಂಡು, ಒಂದಕ್ಕಿಂತ ಇನ್ನೊಂದು ಹೇಗೆ ಭಿನ್ನವಾಗಿದೆ? ಕಮ್ಯುನಿಸಂ ಮತ್ತು ಸೋಷಲಿಸಂ ಎರಡರ ಬಗ್ಗೆ ಹೇಗೆ ಗೊಂದಲ ನಿರ್ಮಾಣವಾಗಿದೆ? ಈ ಎರಡರ ನಡುವಣ ಅಂತರವನ್ನು ಅರಿತುಕೊಳ್ಳುವುದು ಹೇಗೆ? ಕಮ್ಯುನಿಸ್ಟರು ಏಕೆ ತಮ್ಮದು ಸೋಷಲಿಸಂ ಎಂದು ಹೇಳಿಕೊಳ್ಳುತ್ತಾರೆ? ಇತ್ಯಾದಿ ವಿಷಯಗಳನ್ನು ವಿವರವಾಗಿ ಚರ್ಚೆಗೆ ಗುರಿಪಡಿಸಲಾಯಿತು.

ಗಾಂಧಿ, ಅಂಬೇಡ್ಕರ್, ನರೇಂದ್ರ ದೇವ, ಜೆಪಿ, ಲೋಹಿಯಾ, ಯೂಸುಫ್ ಮೆಹರಾಲಿ ಇತ್ಯಾದಿ ಸಮಾಜವಾದಿ ಮುಖಂಡರ ವಿಚಾರಗಳನ್ನು ತಿಳಿಸಲಾಯಿತು.

**ಸೆಪ್ಟೆಂಬರ್ 16ರಂದು** 'ಶೋಷಿತ ಮಹಿಳೆಯರ ಪಾಡು ಮತ್ತು ಅವರ ಶಕ್ತಿ–ಸಾಮರ್ಥ್ಯ' ಕುರಿತು ಚರ್ಚೆ ನಡೆಸಲಾಯಿತು.

**ಸೆಪ್ಟೆಂಬರ್ 17ರಂದು** 'ಸುಳ್ಳು ಸುದ್ದಿಗಳನ್ನು ಅರ್ಥೈಸಿಕೊಳ್ಳುವುದು ಹೇಗೆ?' ವಿಷಯ ಕುರಿತು ಚರ್ಚಿಸಲಾಯಿತು. ಇಂಥ ವಿಷಯಗಳು ಹರಡದಿರುವ ನಿಟ್ಟಿನಲ್ಲಿ ನಾವು ಕೈಗೊಳ್ಳಬೇಕಾದ ಕ್ರಮಗಳು ಏನು ಎಂಬ ಬಗ್ಗೆ ವಿಚಾರ ವಿನಿಮಯ ನಡೆಸಲಾಯಿತು.




**ಹುರುಗಲವಾಡಿ ರಾಮಯ್ಯ**

**ಸೆಪ್ಟೆಂಬರ್ 7ರಂದು** ಜಾನಪದ ಗಾಯಕ, ದಲಿತ ಚಳವಳಿ ಕಾರ್ಯಕರ್ತ, ಕರ್ನಾಟಕ ಸಮಾಜವಾದಿ ವೇದಿಕೆ ಮಂಡ್ಯ ಜಿಲ್ಲೆ ಸಂಘಟಕ ಹುರುಗಲವಾಡಿ ರಾಮಯ್ಯ, 'ನಾನು ಸಾರ್ವಜನಿಕ ಜೀವನಕ್ಕೆ ಬಂದಿದ್ದು' ವಿಷಯ ಕುರಿತು ಮಾತನಾಡಿದರು.



**ಸೆಪ್ಟೆಂಬರ್ 14ರಂದು** 'ದಲಿತರ ಮುಂದಿನ ಮೂರು ಮುಖ್ಯಸವಾಲುಗಳು ಮತ್ತು ಪರಿಹಾರ' ವಿಷಯದ ಬಗ್ಗೆ ಮೈಸೂರಿನ ಸಾಫ್ಟ್ ವೇರ್ ಇಂಜಿನಿಯರ್ ಮತ್ತು ದಲಿತ ಚಳವಳಿಯ ಯುವ ಮುಂದಾಳು ಉಮಾಮಹಾದೇವ ಆಲಗೂಡು ಮಾತನಾಡಿದರು.

ಸ್ವಾಭಿಮಾನದ ಬದುಕು, ಉದ್ಯೋಗ ಮತ್ತು ಸಹಬಾಳ್ವೆ ಇವು ದಲಿತರ ಮುಂದಿನ ಮೂರು ಮುಖ್ಯ ಸವಾಲುಗಳು' ಎಂದು ಗುರುತಿಸಿದ ಅವರು, ಈ ನಿಟ್ಟಿನಲ್ಲಿ ಸಮಾಜವಾದಿ ಚಿಂತನೆ ಬಹಳಷ್ಟು ಸಹಕಾರಿ ಎಂದು ಅವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ದಲಿತ ಸಂಘಟನೆಗಳು ಒಗ್ಗೂಡಬೇಕು; ಬಣಗಳೆಲ್ಲವೂ ರದ್ದುಗೊಳ್ಳಬೇಕು. ಶೋಷಿತರು ಒಂದಾಗಿ ಹೋರಾಟಕ್ಕೆ ಮುಂದಾಗಬೇಕು. ಇದು ನಡೆದರೆ, ನಾನು ಈಗ ಇರುವ ಸಂಘಟನೆಯನ್ನು ವಿಸರ್ಜಿಸಲು ಸಿದ್ಧ ಎಂದು ಅವರು ಅಭಿಪ್ರಾಯಪಟ್ಟರು.

**ಸೆಪ್ಟೆಂಬರ್ 15ರಂದು** ಚಿಂತಕ, ಪ್ರಾದೇಶಿಕ ತಾರತಮ್ಯ ವಿರೋಧಿ ಹೋರಾಟದ ಮುಂದಾಳು ಪ್ರೊ॥ ಅಬ್ದುಲ್ ರಜಾಕ್, 'ಕರ್ನಾಟಕದ ಮುಸ್ಲಿಮರ ಶೈಕ್ಷಣಿಕ–ಆರ್ಥಿಕ ಸ್ಥಿತಿಗತಿ' ಕುರಿತು ಮಾತನಾಡಿದರು.

ಅವರು ಹಲವು ಒಳನೋಟಗಳನ್ನು ಸಮಾಜವಾದಿ ವೇದಿಕೆ ಮಿತ್ರರಿಗೆ ತಿಳಿಯಪಡಿಸಿ, ಸಹಮತದೊಂದಿಗೆ ಮುಂದಿರುವ ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಂಡು, ಸೌಹಾರ್ದಯುತ ಸಮಾಜವನ್ನು ನಿರ್ಮಿಸಬೇಕಿದೆ ಎಂದು ಸೂಚ್ಯವಾಗಿ ತಿಳಿಸಿದರು.



**ಸೆಪ್ಟೆಂಬರ್ 17ರಂದು** ವೈಚಾರಿಕ ಪತ್ರಿಕೆಗಳ ಬಗ್ಗೆ ತಿಳಿದುಕೊಳ್ಳಲಾಯಿತು.

'ಸಂವಾದ', ಹೊಸತು', ಹೊಸ ಮನುಷ್ಯ' 'ರೈತ ಚಳವಳಿ' ಬಗ್ಗೆ ತಿಳಿಸಿ, ಅವುಗಳ ಸಂಪರ್ಕ ನೀಡಿ, ಅವುಗಳನ್ನು ತರಿಸಿಕೊಳ್ಳಲು ಸಲಹೆ ನೀಡಲಾಯಿತು.



**ರಾಜಣ್ಣ ವೈ. ಚಿತ್ರದುರ್ಗ**

**ಸೆಪ್ಟೆಂಬರ್ 18ರಂದು** ಚಿತ್ರದುರ್ಗದ **ರಾಜಣ್ಣ ವೈ.** 'ಸುಳ್ಳು ಜಾತಿಪ್ರಮಾಣ ಪತ್ರಗಳ ಬಗ್ಗೆ ಬಂದಿರುವ ಕೋರ್ಟ್ ತೀರ್ಪುಗಳು' ಕುರಿತು ಹಲವು ವಿಚಾರಗಳನ್ನು ತಿಳಿಸಿಕೊಟ್ಟರು.

ಕೆಲವು ಪ್ರಕರಣಗಳ ಬಗ್ಗೆ ಕರ್ನಾಟಕ ಹೈಕೋರ್ಟು ನೀಡಿದ ತೀರ್ಪುಗಳನ್ನು ತಿಳಿಸಿ, ಸರ್ಕಾರ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಅಲ್ಲದೆ, ಸುಳ್ಳು ಜಾತಿ ಪ್ರಮಾಣಪತ್ರ ಸಂಬಂಧಿ ಪ್ರಕರಣಗಳನ್ನು ನಾವು ಕೋರ್ಟಿಗೆ ಒಯ್ಯುವ ಕೆಲಸ ಆಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

**ಸೆಪ್ಟೆಂಬರ್ 20ರಂದು** ನಡೆದ ಗೂಗಲ್ ಮೀಟ್ ಸಭೆಯಲ್ಲಿ 'ಸಮಾಜವಾದ' ಕುರಿತು ಚರ್ಚಿಸಲಾಯಿತು. ಒಂದು ದಿನ ಮೊದಲೇ ಈ ಕುರಿತು ಯಾರಲ್ಲಾದರೂ ಪ್ರಶ್ನೆಗಳಿದ್ದರೆ ತಿಳಿಸಿ ಎಂದು ಸೂಚಿಸಲಾಗಿತ್ತು.

ಸಮಾಜವಾದಕ್ಕೂ, ಕಮ್ಯುನಿಸಂಗೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಲು ಅನೇಕರು ಇಷ್ಟಪಟ್ಟರು. ಈ ಕುರಿತು ವಿವರಿಸಲಾಯಿತು.

**ಸೆಪ್ಟೆಂಬರ್ 21ರಂದು** 'ಗ್ರಾಮ ಪಂಚಾಯತಿಗಳ ಕಾರ್ಯ ಮತ್ತು ಜವಾಬ್ದಾರಿ' ವಿಷಯದ ಪ್ರಾಮುಖ್ಯವನ್ನು ವಿವರಿಸಿ, ನಂತರ ಈ ಕುರಿತು ಚರ್ಚೆ ಮಾಡಲಾಯಿತು.




**ಸೆಪ್ಟೆಂಬರ್ 22ರಂದು** 'ಬಹುತ್ವ ವೇದಿಕೆ' ಜೊತೆಗೆ ಸೇರಿ 'ಹಿಂದಿ ದಲಿತ ಕಥೆಗಳಲ್ಲಿ ದಲಿತರ ಬದುಕಿನ ಚಿತ್ರಣ' ಕುರಿತು ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಹಿಂದಿ ವಿಭಾಗದ ಸಂಶೋಧನಾ ವಿದ್ಯಾರ್ಥಿ ಸತೀಶ್ ಹೊನ್ನನಾಗರ ಅವರು ವಿಷಯ ಮಂಡನೆ ಮಾಡಿದರು.

**ಸೆಪ್ಟೆಂಬರ್ 24ರಂದು** 'ಸಮಾಜಕ್ಕೆ ಸಂಬಂಧಿಸಿದ ವಿಷಯಗಳಿಗೆ ನಾವು ಹೇಗೆ ಸ್ಪಂದಿಸುವುದು ಸೂಕ್ತ?' ಎಂಬ ವಿಷಯ ಕುರಿತು ಚರ್ಚಿಸಲಾಯಿತು.


**ಸೆಪ್ಟೆಂಬರ್ 25ರಂದು** 'ಸುಳ್ಳು ಜಾತಿಪ್ರಮಾಣ ಪತ್ರಕ್ಕೆ ಸಂಬಂಧಿಸಿ 2019ರಲ್ಲಿ ಕರ್ನಾಟಕ ಹೈಕೋರ್ಟು ನೀಡಿದ ತೀರ್ಪು' ಕುರಿತು ವಿಷಯ ಅರಿತುಕೊಳ್ಳಲಾಯಿತು.

**ಸೆಪ್ಟೆಂಬರ್ 27ರಂದು** 'ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಮತ್ತು ಚಿಂತನೆ' ಎಂಬ ವಿಷಯವನ್ನು ಅರಿತುಕೊಳ್ಳಲಾಯಿತು.

**ಸೆಪ್ಟೆಂಬರ್ 28ರಂದು** ಮಂಡ್ಯದ ಮಿತ್ರ ಹುರುಗಲವಾಡಿ ರಾಮಯ್ಯ 'ಗ್ರಾಮ ಪಂಚಾಯತಿಗಳ ಮೂಲಕ ಸಮಾಜ ಪರಿವರ್ತನೆ' ವಿಷಯ ಕುರಿತು ತಮ್ಮ ಅನುಭವ ತಿಳಿಸಿದರು.

**ಸೆಪ್ಟೆಂಬರ್ 29ರಂದು** ಸರ್ಕಾರಿ ಪ.ಪೂ.ಕಾಲೇಜಿನ ಉಪನ್ಯಾಸಕ ರವಿ ಬಿ.ಕೆ. ಅವರು 'ದಮನಿತರ ದಾರಿ ದೀಪ: ಅಂಬೇಡ್ಕರ್' ಎಂಬ ವಿಷಯ ತಿಳಿಸಿಕೊಟ್ಟರು.

**ಸೆಪ್ಟೆಂಬರ್ 30ರಂದು** ಮಹಿಳಾ ಚಳವಳಿಗಳ ಶೋಷಿತ ಸಮುದಾಯಗಳ ಮಹಿಳೆಯರ ಪಾಲ್ಗೊಳ್ಳುವಿಕೆ' ವಿಷಯವನ್ನು ಅರಿತುಕೊಳ್ಳಲಾಯಿತು.



ಮಹಾರಾಷ್ಟ್ರದ ಸೇವಾಗ್ರಾಮ ಆಶ್ರಮದಲ್ಲಿ 'ಸೋಷಲಿಸ್ಟ್ ಪಾರ್ಟಿ (ಇಂಡಿಯಾ) ಪಕ್ಷದ ದ್ವೈವಾರ್ಷಿಕ ಸಮ್ಮೇಳನ ನಡೆಯುತ್ತಿರುವುದು ತಿಳಿದು ಬಂತು. ಅದರಲ್ಲಿ ಭಾಗವಹಿಸಲು ಕರ್ನಾಟಕದಿಂದ ಹಿಂದಿ ಅರ್ಥ ಮಾಡಿಕೊಳ್ಳಲು ಮತ್ತು ಮಾತನಾಡಲು ಬಲ್ಲ ಇಬ್ಬರು ಯುವಕರನ್ನು ಮತ್ತು ಇಬ್ಬರು ಯುವತಿಯರನ್ನು ಕಳುಹಿಸಿಕೊಡಲು ನಿರ್ಧರಿಸಲಾಯಿತು.

ಈ ಕುರಿತ ಜವಾಬ್ದಾರಿಯನ್ನು ಕಲಬುರಗಿ ಜಿಲ್ಲೆ ವಾಡಿಯಲ್ಲಿ **ಪತ್ರಕರ್ತ ವಿಕ್ರಮ್ ತೇಜಸ್** ಅವರಿಗೆ ನೀಡಲಾಯಿತು. ಅವರು ಆಸಕ್ತಿ ಇರುವ ಮತ್ತು ಹಿಂದಿ ಭಾಷೆ ಬಲ್ಲ ಯುವಕ-ಯುವತಿಯರನ್ನು ಸಂಪರ್ಕಿಸಿ, ಅವರ ಒಪ್ಪಿಗೆಯನ್ನು ತೆಗೆದುಕೊಳ್ಳುವುದು ಸೂಕ್ತ ಎಂದು ತೀರ್ಮಾನ ಮಾಡಲಾಯಿತು.

ಮೊದಲು ಕಲಬುರಗಿಯ ಪೂಜಾ ಸಿಂಗೆ, ಸತೀಶ ಹೊನ್ನನಾಗರ, ವಿಕ್ರಮ್ ತೇಜಸ್ ಮತ್ತು ವಿಜಯಪುರದ ಭುವನೇಶ್ವರಿ ಹೋಗುವ ನಿರ್ಣಯ ಆಯಿತು. ಆದರೆ, ಕಡೇ ಹೊತ್ತಿನಲ್ಲಿ ಇಬ್ಬರೂ ಯುವತಿಯರು ಅನಾನುಕೂಲ ಎಂದು ತಿಳಿಸಿದ್ದರಿಂದ, ಕಲಬುರಗಿ ಜಿಲ್ಲೆಯ **ಸತೀಶ್ ಹೊನ್ನನಾಗರ,** ರಾಹುಲ್ ಮತ್ತು ವಿಕ್ರಮ್ ಅವರು ಹೋಗುವುದೆಂದು ನಿರ್ಧಾರವಾಯಿತು.

ಈ ಮೂವರೂ ಯುವಕರು ಸಮ್ಮೇಳನಕ್ಕೆ ಹೋಗಿ ಬಂದರು. ಅಪಾರವಾಗಿ ಪ್ರಭಾವಿತರಾದ ಬಗ್ಗೆ ಮತ್ತು ತಮ್ಮ ಅನುಭವದ ಬಗ್ಗೆ ಅವರು ಅಕ್ಟೋಬರ್ 4ರಂದು ನಡೆದ ಗೂಗಲ್ ಮೀಟ್‌ನಲ್ಲಿ ತಿಳಿಸಿದರು.

**ಸೆಪ್ಟೆಂಬರ್ 23ರಂದು** 'ಶೋಷಿತರ ಸಬಲೀಕರಣ' ವಿಷಯ ಕುರಿತು ನಡೆದ ಸಭೆಯಲ್ಲಿ, ಹೊಸ ಮಿತ್ರ ಸರ್ವೇಶ್ ಅವರಿಗೆ 'ಪ.ಜಾತಿ ಪ. ಪಂಗಡಗಳ ಆಯೋಗ'ದ ಬಗ್ಗೆ ತಿಳಿಸಿ, ಅನುಕೂಲವಾದಾಗ, ಆ ಕಚೇರಿಗೆ ಹೋಗಿ, 'ಆಯೋಗದ ಅಧಿನಿಯಮ ಮತ್ತು ನಿಯಮಾವಳಿ' ಪುಸ್ತಕವನ್ನು ಪಡೆದುಕೊಳ್ಳಿ' ಎಂದು ತಿಳಿಸಲಾಯಿತು. ಅವರು ಒಂದು ವಾರದಲ್ಲೇ ಆಯೋಗದ ಕಚೇರಿಗೆ ಹೋಗಿ, ಪುಸ್ತಕದ ಪ್ರತಿಗಳನ್ನು ಪಡೆದುಕೊಂಡು ಬಂದರು. ಸರ್ಕಾರಿ ಯೋಜನೆ/ಕಾರ್ಯಕ್ರಮ/ಸಂಸ್ಥೆಗಳ ಬಗ್ಗೆ ಅಧ್ಯಯನ ಅವಶ್ಯ. ಆಗಲೇ ನಾವು ವಿಶ್ಲೇಷಣೆ ಮಾಡಬಹುದು, ಸರ್ಕಾರವನ್ನು ಪ್ರಶ್ನೆಮಾಡಬಹುದು ಆ ಮೂಲಕ ಸಮಾಜಕ್ಕೆ ಒಳ್ಳೆಯದನ್ನು ಮಾಡಬಹುದು ಎಂಬ ಬಗ್ಗೆ ತಿಳಿದುಕೊಳ್ಳಲಾಯಿತು.

## ಕ್ರಿಯಾಶೀಲರಿಗೆ ಹೋಮ್‌ವರ್ಕ್


'ಕರ್ನಾಟಕ ವಿಕಾಸ' ಎಂಬ ಮಾಸಪತ್ರಿಕೆಯು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಪ್ರಕಟವಾಗುತ್ತದೆ.

'ಜನಪದ' ಎಂಬುದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಪ್ರಕಟವಾಗುತ್ತದೆ.


'ಇವುಗಳನ್ನು ಎಲ್ಲರೂ ತರಿಸಿಕೊಳ್ಳಿ; ಮಾಹಿತಿ ಪಡೆದುಕೊಳ್ಳಿ' ಎಂದು ತಿಳಿಸಲಾಯಿತು.

ಹಾಗೆಯೆ, 'ಗ್ರಾಮ ಪಂಚಾಯತಿ ಕಚೇರಿಗಳಲ್ಲಿ ಸಿಸಿಟಿವಿ ಅಳವಡಿಸುವ ಬಗ್ಗೆ ಸರ್ಕಾರಿ ಆದೇಶ ಇದೆ. ಅಳವಡಿಸಿದ್ದಾರೆಯೆ? ಪಂಚಾಯತ್‌ಗೆ ಹೋಗಿ ನೋಡಿ' ಎಂದೂ ತಿಳಿಸಲಾಯಿತು.

# ಗೂಗಲ್ ಮೀಟ್ ಸಭೆಗಳು ಅಕ್ಟೋಬರ್ ತಿಂಗಳು



**ಅಕ್ಟೋಬರ್ 1ರಂದು** ಅನಂತ ಪದ್ಮನಾಭ ಅವರು 'ವೈಚಾರಿಕ ಲೋಕಕ್ಕೆ ವಿಶಿಷ್ಟ ಕೊಡುಗೆ ನೀಡಿದ ಗೌರೀಶ ಕಾಯ್ಕಿಣಿ ಅವರ 'ಭಾರತೀಯ ಸಂಸ್ಕೃತಿಯು ಆಧ್ಯಾತ್ಮಿಕವೆ?' ಎಂಬ ಕೃತಿಯನ್ನು ಕುರಿತು ಮಾತನಾಡಿದರು. ಕೃತಿಯಲ್ಲಿನ ವೈಚಾರಿಕ ಅಂಶಗಳನ್ನು ಅನಂತ್ ವಿವರಿಸಿದರು.



**ಅಕ್ಟೋಬರ್ 2ರಂದು** 'ಗಾಂಧೀಜಿ ಅವರನ್ನು ಪೂಜಿಸಬೇಕೆ? ದ್ವೇಷಿಸಬೇಕೆ?' ಎಂಬ ವಿಷಯ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

ಪ್ರಸ್ತುತ, ಜನಸಾಮಾನ್ಯರು ಗಾಂಧಿ ಅವರನ್ನು ಒಂದೆಡೆ ನಿರ್ಲಕ್ಷಿಸುತ್ತಿದ್ದರೆ, ಸಮಾಜದಲ್ಲಿ ಪರಿವರ್ತನೆ ಬಯಸುವವರಲ್ಲೇ ಕೆಲವರು ಇನ್ನೊಂದೆಡೆ ಅವರನ್ನು ದ್ವೇಷಿಸುವುದನ್ನು ಗಮನಿಸಿ, ಈ ವಿಷಯ ಕುರಿತು ಚರ್ಚೆ ನಡೆಸಲಾಯಿತು.

ದ್ವೇಷಿಸುವುದು ಮತ್ತು ಪೂಜಿಸುವುದು ಎರಡೂ ಸರಿಯಲ್ಲ; ಗಾಂಧಿ ಅವರನ್ನು ಅರ್ಥಮಾಡಿಕೊಳ್ಳಬೇಕು. ಅವರ ವಿಚಾರಗಳ ಪ್ರಸ್ತುತತೆಯನ್ನು ಮನಗಾಣಬೇಕು. ಇಂದಿಗೂ ಅವಶ್ಯ ಎಂಬಂಥ ವಿಚಾರಗಳನ್ನು ಸಮಾಜದಲ್ಲಿ ಪ್ರಸಾರ ಮಾಡಬೇಕು ಎಂಬುದನ್ನು ಮನವರಿಕೆ ಮಾಡಿಕೊಳ್ಳಲಾಯಿತು.




**ಅಕ್ಟೋಬರ್ 5 ರಂದು** 'ಸಮಾಜದಲ್ಲಿ ಪರಿವರ್ತನೆ ತರಲು ಪಂಚಾಯತಿ ಗಳ ಮೂಲಕ ಪ್ರಯತ್ನ' ಕುರಿತು, ಪಂಚಾಯತಿಗೆ



ಸಂಬಂಧಿಸಿದ ಕಾರ್ಯಗಳಲ್ಲಿ ತೊಡಗಿರುವ ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ರಾಹುಲ್ ಸಿಂಗೆ ಮಾತನಾಡಿದರು. ಪಂಚಾಯತಿಗಳ ಮೂಲಕವೇ ಸಾಕಷ್ಟು ಪರಿವರ್ತನೆಯನ್ನು ನಮ್ಮ ಸಮಾಜದಲ್ಲಿ ತರಲು ಸಾಧ್ಯ ಎಂಬುದನ್ನು ಅವರು ಒತ್ತಿ ಹೇಳಿದರು.

ಕೇರಳದ ಒಂದು ಗ್ರಾಮ ಪಂಚಾಯತಿ ಕಚೇರಿಯನ್ನು ವಾಟ್ಸ್ಯಾಪ್ ಗ್ರೂಪಿನಲ್ಲಿ ಪ್ರಸಾರ ಮಾಡಿ, ಇಂಥ ಸುಸಜ್ಜಿತ ಪಂಚಾಯತ್ ಕಟ್ಟಡಗಳು ನಮ್ಮ ಸುತ್ತ ಮುತ್ತ ಇವೆಯೇ ಎಂಬುದನ್ನೂ ಗಮನಿಸಲು ತಿಳಿಸಲಾಯಿತು.

---




ಶ್ರೇಷ್ಠ ಸಮಾಜವಾದಿಗಳಲ್ಲಿ ಒಬ್ಬರೆನಿಸಿದ ಲೋಕನಾಯಕ ಜಯಪ್ರಕಾಶ ನಾರಾಯಣ ಅವರ ಜನ್ಮ ದಿನ **ಅಕ್ಟೋಬರ್ 11ರಂದು** 'ಜೆಪಿ ಜೀವನ–ಚಿಂತನೆ–ಸಾಧನೆ' ವಿಷಯ ಕುರಿತು ನಾಡಿನ ಹಿರಿಯ ಸಮಾಜವಾದಿ ಲೇಖಕರಾದ ಪ್ರೊ|| ಹನುಮಂತ, ಸುದೀರ್ಘವಾಗಿ ತಿಳಿಸಿಕೊಟ್ಟರು. ಈ ಸಭೆಯನ್ನು ಸಂಘಟಿಸುವಲ್ಲಿ ಅಂಬಿಕಾ ಗೌಡ ಅವರು ವಿಶೇಷ ಮುತುವರ್ಜಿ ವಹಿಸಿದ್ದರು.

ತುರ್ತುಪರಿಸ್ಥಿತಿ ನಂತರ, ಜನತಾ ಪಕ್ಷ ರಚನೆಯಾದಾಗ, ಅದರಲ್ಲಿ ಜನಸಂಘ–ಸಮಾಜವಾದಿ ಪಕ್ಷ ಇತ್ಯಾದಿ ಅನೇಕ ಪಕ್ಷಗಳು ವಿಲೀನಗೊಂಡಿದ್ದಕ್ಕೆ ಜೆಪಿ ಬೆಂಬಲ ಇತ್ತು ಎಂದು ಅವರು ತಿಳಿಸಿದರು. ಜನಸಂಘವು ನಂತರ ಜನತಾ ಪಕ್ಷದಿಂದ ಹೊರ ಬಂದು, ಬಿಜೆಪಿ ಎಂದು ಹೆಸರಿಟ್ಟುಕೊಂಡು, ಈಗ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮಟ್ಟಕ್ಕೆ ಬೆಳದಿರುವುದು ಅಂದು ಅದನ್ನು ಜನತಾ ಪಕ್ಷದಲ್ಲಿ ಸೇರಿಸಿಕೊಂಡದ್ದರಿಂದಲೇ ಸಾಧ್ಯವಾಯಿತು. ಇದಕ್ಕೆ ಜೆಪಿ ಮುಖ್ಯ ಕಾರಣ ಎಂಬ ಆರೋಪವನ್ನು ಕೆಲವು ಕಡೆ ಮಾಡುತ್ತಿರುವ ಕುರಿತೂ ಚರ್ಚೆ ನಡೆಯಿತು.

ಪ್ರೊ|| ಹನುಮಂತ ಅವರು 'ರಾಜಕೀಯ ತೀರ್ಮಾನಗಳನ್ನು ಆಯಾ ಸಂದರ್ಭಕ್ಕೆ ತಕ್ಕ ಹಾಗೆ ಕೈಗೊಳ್ಳಬೇಕಾಗುತ್ತದೆ; ಎದುರು ಇರುವ ಪ್ರಬಲ ವಿರೋಧಿಯನ್ನು ಗುರುತಿಸಿ, ಇತರರನ್ನು ಒಗ್ಗೂಡಿಸಿ, ರಾಜಕಾರಣ ಮಾಡುವುದೇ ಸೂಕ್ತ. ಜೆಪಿ ಇದನ್ನೇ ಮಾಡಿದರು' ಎಂದು ಅವರು ತಿಳಿಸಿದರು. ಸಭೆಯಲ್ಲಿ ಬಿಸಿಬಿಸಿ ಚರ್ಚೆ ಆಯಿತು. ಯುವಜನರು ಚರ್ಚೆಯಲ್ಲಿ ಭಾಗಿಯಾದರು.





**ಅಕ್ಟೋಬರ್ 6ರಂದು** 'ನಾನು ಸಾರ್ವಜನಿಕ ಜೀವನ ಪ್ರವೇಶಿಸಿದ್ದು' ಎಂಬ ವಿಷಯ ಕುರಿತು ತುಮಕೂರು ಜಿಲ್ಲೆ ಶಿರಾ ಪಟ್ಟಣದ ಎಸ್. ರಂಗ ರಾಜು (ಮಾನವ ಬಂಧುತ್ವ ವೇದಿಕೆ) ಇವರು ಮಾತನಾಡಿದರು.

ವೈಯಕ್ತಿಕ ಜೀವನದ ಜೊತೆಗೆ ಸಾರ್ವಜನಿಕ ಜೀವನವೂ ಮುಖ್ಯ. ಇದರಿಂದ, ಸಮಾಜಕ್ಕೆ ಉಪಯುಕ್ತ ಜೀವವಾಗಿ ಬದುಕುವುದು ಸಾಧ್ಯವಾಗುತ್ತದೆ ಎಂಬ ಅಂಶವನ್ನು ಅವರು ಮನವರಿಕೆ ಮಾಡಿಕೊಟ್ಟರು.

**ಅಕ್ಟೋಬರ್ 7ರಂದು** 'ಶೋಷಿತ ಮಹಿಳೆಯರಿಗೆ ಡಾ॥ ಅಂಬೇಡ್ಕರ್ ಸಂದೇಶ' ವಿಷಯದ ಬಗ್ಗೆ ಶಶಿಕಲಾ ಬೆಂಗಳೂರು ಇವರು ಮಾತನಾಡಿದರು.

ಎಲ್ಲಾ ಜಾತಿಗಳ ಮಹಿಳೆಯರೂ ಡಾ॥ ಅಂಬೇಡ್ಕರ್ ಚಿಂತನೆ ಮತ್ತು ಕೊಡುಗೆಯನ್ನು ಅರ್ಥಮಾಡಿಕೊಳ್ಳುವ ಅವಶ್ಯಕತೆ ಇದೆ ಎಂಬುದನ್ನು ಅವರು ಒತ್ತಿ ಹೇಳಿದರು.



**ಶಿಕ್ಷಕಿ ದಿಲ್‌ಶಾದ್ ಬೇಗಮ್**

**ಅಕ್ಟೋಬರ್ 8ರಂದು** ವಿಜಯನಗರ ಜಿಲ್ಲೆಯ ಶಿಕ್ಷಕಿ ದಿಲ್‌ಶಾದ್ ಬೇಗಮ್ ಅವರು 'ನಾನು–ನಾವು ಮತ್ತು ನಮ್ಮ ಸಮಾಜ' ವಿಷಯ ಕುರಿತು ತಮ್ಮ ಚಿಂತನೆಯನ್ನು ಹಂಚಿಕೊಂಡರು.



**ಡಾ॥ ರಾಮಮನೋಹರ ಲೋಹಿಯಾ**

**ಅಕ್ಟೋಬರ್ 12ರಂದು** ಇನ್ನೊಬ್ಬ ಶ್ರೇಷ್ಠ ಸಮಾಜವಾದಿ ಡಾ॥ ರಾಮ ಮನೋಹರ ಲೋಹಿಯಾ ಕುರಿತು ವಿಷಯವನ್ನು ಹಂಚಿಕೊಳ್ಳಲಾಯಿತು.


ಅವರ 'ಸಪ್ತ ಕ್ರಾಂತಿ' ವಿವರಗಳನ್ನು ತಿಳಿಸಿದಾಗ, ಯುವಜನರಲ್ಲಿ ಈ ಬಗ್ಗೆ ವಿಶೇಷ ಆಸಕ್ತಿ ಮೂಡಿದ್ದು ವ್ಯಕ್ತವಾಯಿತು.

ಕನ್ನಡದಲ್ಲಿ ಲೋಹಿಯಾ ಸಾಹಿತ್ಯ ಪ್ರಕಟವಾಗುತ್ತಿರುವುದು ನಿಧಾನ ಆಗುತ್ತಿರುವ ಬಗ್ಗೆಯೂ ವಿಚಾರ ವಿನಿಮಯ ನಡೆಯಿತು. ಈ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಖ್ಯಸ್ಥರಿಗೆ ಪತ್ರ ಬರೆಯುವುದು ಅವಶ್ಯ ಎಂದು ಅಭಿಪ್ರಾಯಪಡಲಾಯಿತು.

**ಅಕ್ಟೋಬರ್ 13ರಂದು** 'ನಮ್ಮ ಬದುಕಿನಲ್ಲಿ ಸಾಹಿತ್ಯದ ಮಹತ್ವ' ವಿಷಯ ಕುರಿತು ಅನೇಕ ವಿಚಾರಗಳನ್ನು ತಿಳಿದುಕೊಳ್ಳಲಾಯಿತು.

ಬದುಕಿಗೊಂದು ವಿಶಿಷ್ಟ ಅರ್ಥ ಬರಲು ಎಲ್ಲರೂ ಓದುವುದನ್ನು ಅಭ್ಯಾಸ ಮಾಡಿಕೊಳ್ಳುವುದು ಅವಶ್ಯ ಎಂಬುದನ್ನು ಮನವರಿಕೆ ಮಾಡಿಕೊಳ್ಳಲಾಯಿತು.

ತಿಂಗಳಿಗೆ ಒಂದಾದರೂ ಸಾಹಿತ್ಯ ಕೃತಿ ಓದುವ ರೂಢಿ ಒಳ್ಳೆಯದು ಎಂಬ ಕಿವಿಮಾತು ಕೂಡ ಸಭೆಯಲ್ಲಿ ಕೇಳಿ ಬಂತು.



'ಇದೊಂದು ಉತ್ತಮ ವಿಷಯ. ಇದಕ್ಕಾಗಿ, ಇಂದಿನ ನನ್ನ ಕೆಲಸ ಕಾರ್ಯಗಳಲ್ಲಿ ತುಸು ಮಾರ್ಪಾಟು ಮಾಡಿಕೊಂಡು ನಾನು ಸಭೆಗೆ ಹಾಜರಾದೆ' ಎಂದು ಮನದುಂಬಿ ಹೇಳಿದ್ದು ಜಮಾತ್–ಇ–ಹಿಂದ್ ಸಂಸ್ಥೆಯ ಮೊಹಮ್ಮದ್ ನವಾಜ಼್.

**ಅಕ್ಟೋಬರ್ 14ರಂದು** 'ಮಹಿಳೆಯರು, ಶೋಷಿತ ಮಹಿಳೆಯರು ಮತ್ತು ದಲಿತ–ಆದಿವಾಸಿ ಮಹಿಳೆಯರು' ಎಂಬ ವಿಷಯವನ್ನು ಕೂಲಂಕಷವಾಗಿ ಅರ್ಥೈಸಿಕೊಳ್ಳಲಾಯಿತು.

**ಅಕ್ಟೋಬರ್ 15ರಂದು** 'ಯುದ್ಧಗಳು, ಅವುಗಳ ಪ್ರಕಾರಗಳು, ವಿದೇಶಾಂಗ ನೀತಿ ಮತ್ತು ವಿಶ್ವದಲ್ಲಿ ಶಾಂತಿ–ಸಹಕಾರ–ಬಾಂಧವ್ಯ' ಎಂಬ ವಿಷಯ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

**ಅಕ್ಟೋಬರ್ 16ರಂದು** 'ದಲಿತರು ಮತ್ತು ಪೊಲೀಸ್ ವ್ಯವಸ್ಥೆ' ಕುರಿತು ಗದಗ್ ಪಟ್ಟಣದ ರಮೇಶ್ ಕೋಳೂರ್ ವಿಷಯ ಮಂಡಿಸಿದರು.

ದಲಿತರು ಪೊಲೀಸರೊಂದಿಗೆ ಹೇಗೆ ಸಂಬಂಧ ಇಟ್ಟುಕೊಳ್ಳಲು ಸಾಧ್ಯ? ದೌರ್ಜನ್ಯಗಳಿಗೆ ಸಂಬಂಧಪಟ್ಟ ಕಾನೂನುಗಳು ಯಾವುವು? ಮುಂತಾದ ಅಂಶಗಳನ್ನು ಉದಾಹರಣೆ ನೀಡುತ್ತಾ ಮನಸಿಗೆ ನಾಟುವ ಹಾಗೆ ರಮೇಶ್ ಅವರು ತಿಳಿಸಿದರು. ದಲಿತ ಯುವಜನರು ಸಂವಿಧಾನ ಚೌಕಟ್ಟಿನಲ್ಲೇ ಕಾರ್ಯನಿರ್ವಹಿಸಬೇಕು; ಎಲ್ಲಾ ಕಾನೂನುಗಳ ಪ್ರಯೋಜನ ಪಡೆದುಕೊಳ್ಳಬೇಕು ಎಂದೂ ಅವರು ತಿಳಿಸಿದರು.



**ಅಕ್ಟೋಬರ್ 18ರಂದು** 'ಸಮಾಜವಾದಿ ಚಿಂತನೆ ಮತ್ತು ಸಂಘಟನೆ' ವಿಷಯ ತಿಳಿದುಕೊಳ್ಳಲಾಯಿತು.

'ವಿಚಾರ ತಿಳಿದುಕೊಳ್ಳುವುದು ಮುಖ್ಯ. ಹಾಗೆಯೆ, ತಿಳಿದುಕೊಂಡ ವಿಚಾರವನ್ನು ಇತರರಿಗೆ ತಲುಪಿಸುವುದೂ ಮುಖ್ಯ. ಇದಕ್ಕಾಗಿ ನಾವು ಸಮಾಜವಾದಿಗಳು ಸಂಘಟನೆ ಮಾಡಿಕೊಳ್ಳುವ ಅವಶ್ಯಕತೆ ಇದೆ' ಎಂಬುದನ್ನು ವಿಶೇಷವಾಗಿ ಯುವಜನರಿಗೆ ವಿವರಿಸಿ, ಮುಂದಿನ ಸಭೆಗಳಲ್ಲಿ ಈ ಕುರಿತು ಹೆಚ್ಚಿನ ಅನಿಸಿಕೆಗಳನ್ನು ಹೇಳಲು ಅವಕಾಶ ಇದೆ ಎಂದೂ ತಿಳಿಸಲಾಯಿತು.

**ಅಕ್ಟೋಬರ್ 19ರಂದು** 'ಮಕ್ಕಳ ಗ್ರಾಮ ಸಭೆ ಎಂದರೇನು? ಇದು ಪರಿಣಾಮಕಾರಿಯಾಗಿ ನಡೆಯಲು ನಮ್ಮ ಪಾಲ್ಗೊಳ್ಳುವಿಕೆ ಹೇಗೆ ಅವಶ್ಯ?' ಎಂಬ ವಿಷಯ ಕುರಿತು ವಿಚಾರ ಮಂಡಿಸಿದ್ದು ತುಮಕೂರು ಜಿಲ್ಲೆಯ ಸಂಚಲನ ಯುವಜನ ಸಂಘದ ಅಧ್ಯಕ್ಷ ಸಿ.ಎಂ.ಎಸ್.ಗೌಡ.

ಈ ಕುರಿತ ಸಮಗ್ರ ಮಾಹಿತಿಯನ್ನು ಅವರು ತಿಳಿಸಿದರು.




**ಡಾ. ಸಿ. ನಾಗರಾಜ**

**ಅಕ್ಟೋಬರ್ 20ರಂದು** 'ಪುರಂದರ ದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಕಳಕಳಿ' ಎಂಬ ವಿಷಯ ಕುರಿತು ಡಾ॥ ಸಿ. ನಾಗರಾಜ, ಕನ್ನಡ ಪ್ರಾಧ್ಯಾಪಕರು, ಎಸ್.ಸಿ.ಟಿ. ಡಿಗ್ರಿ ಕಾಲೇಜು, ಮುಳಬಾಗಿಲು ಇವರು ಮಾತನಾಡಿದರು.

**ಅಕ್ಟೋಬರ್ 21ರಂದು** 'ಶೋಷಿತ ಮಹಿಳೆಯರು ಸಂಘಟನೆ ಆಗುವ ಅವಶ್ಯಕತೆ' ಎಂಬ ವಿಷಯದ ಬಗ್ಗೆ ವಿಚಾರ ತಿಳಿದುಕೊಳ್ಳಲಾಯಿತು.

**ಅಕ್ಟೋಬರ್ 23ರಂದು** 'ಸುಳ್ಳು ಜಾತಿ ಪ್ರಮಾಣಪತ್ರಗಳ ಮೂಲಕ ಆಗುತ್ತಿರುವ ಘೋರ ಅನ್ಯಾಯ' ವಿಷಯ ಕುರಿತು ವಿಚಾರವನ್ನು ಹಂಚಿಕೊಳ್ಳಲಾಯಿತು.

ಅಂದಿನ ಸಭೆಗೆ 'ವೀಕ್ ಎಂಡ್ ಸ್ಟಡೀ ಗ್ರೂಪ್'ನ ಯುವಜನರು ಜಾಯ್ನ್ ಆಗಿದ್ದುದು ವಿಶೇಷವಾಗಿತ್ತು.




**ಅಕ್ಟೋಬರ್ 22ರಂದು** 'ಜಾಂಬಿಯಾ ದೇಶ ಮತ್ತು ಅಲ್ಲಿ ಇತ್ತೀಚೆಗೆ

ನಡೆದ ಚುನಾವಣೆ' ಎಂಬ ವಿಷಯ ಕುರಿತು ಮಾಹಿತಿಯನ್ನು ತಿಳಿದು ಕೊಳ್ಳಲಾಯಿತು.

ಪ್ರಜಾಪ್ರಭುತ್ವವು ಅರಳುವುದಕ್ಕೆ ಅಲ್ಲಿ ಇರುವ ವಿಭಿನ್ನ ಅಡ್ಡಿಗಳ ಬಗ್ಗೆ ಪರಿಚಯ ಆಯಿತು.

**ಅಕ್ಟೋಬರ್ 25ರಂದು** 'ಸಮಾಜವಾದಿ ವೇದಿಕೆಯನ್ನು ಬಲಪಡಿಸುವುದು ಹೇಗೆ?' ಎಂಬ ವಿಷಯ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

**ಅಕ್ಟೋಬರ್ 26ರಂದು** 'ಮಹಿಳಾ ಸಂಘಟನೆಗಳು ನಡೆದು ಬಂದ ದಾರಿ' ವಿಷಯ ಕುರಿತು ವಿಚಾರ ತಿಳಿದುಕೊಳ್ಳಲಾಯಿತು.

**ಅಕ್ಟೋಬರ್ 27ರಂದು** 'ಬಹುಮುಖಿ ಪ್ರತಿಭೆ: ಪೂರ್ಣಚಂದ್ರ ತೇಜಸ್ವಿ' ಎಂಬ ವಿಷಯದ ಬಗ್ಗೆ ಕ್ರೈಸ್ಟ್ ವಿಶ್ವವಿದ್ಯಾಲಯದ ಮಿಥುನ್ ಬಿ.ಎನ್. ಮಾತನಾಡಿದರು.

ಸಮಾಜವಾದಿ ಚಿಂತನೆಯನ್ನೇ ಹೊಂದಿದ್ದ ತೇಜಸ್ವಿ, ಕನ್ನಡ ಸಾಹಿತ್ಯಕ್ಕೆ



ಹೇಗೆ 'ಹೊಸ ವಿಚಾರಗಳು' ಎಂಬ ಕೃತಿಯ ಮೂಲಕ ವಿಶಿಷ್ಟ ಕೊಡುಗೆ ನೀಡಿದ್ದನ್ನು ತಿಳಿಸಿದರು.

**ಅಕ್ಟೋಬರ್ 29ರಂದು** 'ಸುಡಾನ್ ದೇಶ ಮಿಲಿಟರಿ ಪಡೆ ಕೈವಶ' ಎಂಬ ವಿಷಯ ಕುರಿತು ಮಾಹಿತಿಯನ್ನು ತಿಳಿದುಕೊಳ್ಳಲಾಯಿತು.




---

# ಗೂಗಲ್ ಮೀಟ್ ಸಭೆಗಳು ನವೆಂಬರ್ ತಿಂಗಳು

**ನವೆಂಬರ್ 1ರಂದು** 'ಕರ್ನಾಟಕ ಸಮಾಜವಾದಿ ವೇದಿಕೆಯ ಜಿಲ್ಲಾ ಘಟಕಗಳನ್ನು ಮಾಡಬಹುದೆ?' ಎಂಬ ವಿಷಯ ಕುರಿತು ಚರ್ಚೆ ಮಾಡಲಾಯಿತು.

ನಾವು ಇದುವರೆಗೆ ತಿಳಿದು ಕೊಂಡಿರುವ ವಿಷಯಗಳನ್ನು ಜಿಲ್ಲಾ ಮಟ್ಟದಲ್ಲಿ ಪ್ರಸಾರ ಮಾಡುವ ಬಗ್ಗೆ ಸಲಹೆ ಕೇಳಲಾಯಿತು.

ಸಮಾಜವಾದ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ, ಸಂವಿಧಾನ ಇತ್ಯಾದಿ ಉತ್ತಮ ವಿಷಯಗಳನ್ನು ಕುರಿತ ಕಿರುಪುಸ್ತಕಗಳನ್ನು ಜಿಲ್ಲೆಯ ಶಿಕ್ಷಕರಿಗೆ, ಉಪನ್ಯಾಸಕರುಗಳಿಗೆ, ಪ್ರಾಧ್ಯಾಪಕರುಗಳಿಗೆ, ವಕೀಲರುಗಳಿಗೆ ನೀಡಬಹುದೆ? ಈ ಮೂಲಕ ಅವರ ಗಮನವನ್ನು ಸಮಾಜವಾದದ ಕಡೆಗೆ ಸೆಳೆಯಬಹುದೇ? ಎಂಬ ಬಗ್ಗೆ ವಿಚಾರವಿನಿಮಯ ಮಾಡಲಾಯಿತು.

**ನವೆಂಬರ್ 3ರಂದು** 'ಕನ್ನಡದ ಶಕ್ತಿ: ಅಕ್ಕಮಹಾದೇವಿ' ಎಂಬ ವಿಷಯದ ಬಗ್ಗೆ ಸವಿತಾ ಶರತ್ ಅವರು ವಿಚಾರ ತಿಳಿಸಿದರು.

**ನವೆಂಬರ್ 5ರಂದು** 'ಶ್ರೀಲಂಕಾ ವಿದ್ಯಮಾನಗಳು' ವಿಷಯದ ವಿವಿಧ ಮಗ್ಗುಲುಗಳನ್ನು ಅರ್ಥಮಾಡಿಕೊಳ್ಳಲಾಯಿತು.

**ನವೆಂಬರ್ 6ರಂದು** 'ಸುಳ್ಳು ಜಾತಿ ಪ್ರಮಾಣ ಪತ್ರ: ಅಣಪ್ಪ ಪ್ರಕರಣದ ತೀರ್ಪು' ಎಂಬ ವಿಷಯವನ್ನು ತಿಳಿದುಕೊಳ್ಳಲಾಯಿತು.

**ನವೆಂಬರ್ 10ರಂದು** 'ನಾನು ಆಮಿರ್ ಖಾನ್, ಭಯೋತ್ಪಾದಕನಲ್ಲ' (ಕನ್ನಡಕ್ಕೆ ಎ.ಎಸ್.ನೂರ್‌ಅಹಮದ್) ಕೃತಿ ಬಗ್ಗೆ ಚರ್ಚೆ ನಡೆಸಲಾಯಿತು.

'ಆರೋಪಿಗಳನ್ನು ಅಪರಾಧಿಗಳು ಎಂದು ಬಿಂಬಿಸುವುದು ಸರಿಯಲ್ಲ; ಅಪರಾಧಿಗಳನ್ನು ಅವರ ಜಾತಿಧರ್ಮ ಹಿನ್ನೆಲೆಯಲ್ಲಿ ಗುರುತಿಸುವುದು ತರವಲ್ಲ' ಎಂಬುದನ್ನು ಮನಗಾಣಲಾಯಿತು. ಇತ್ತೀಚಿನ ವರ್ಷಗಳಲ್ಲಿ ಮುಸ್ಲಿಂ ವ್ಯಕ್ತಿಗಳ ಮೇಲೆ ವಿನಾಕಾರಣ ಸಂಶಯದ ನೋಟ ಬೀರಲಾಗುತ್ತಿದೆ ಎಂಬುದನ್ನು ವಿವರವಾಗಿ ತಿಳಿದುಕೊಳ್ಳಲಾಯಿತು.

**ನವೆಂಬರ್ 8ರಂದು** 'ಕುಪ್ಪಳ್ಳಿಯಲ್ಲಿ ನಡೆದ ಸಮಾಜವಾದಿ ಶಿಬಿರ: ನನ್ನ ಅನುಭವ' ವಿಷಯ ಕುರಿತು ತುಮಕೂರಿನಲ್ಲಿ ಕಾನೂನು ಪದವಿ ಓದುತ್ತಿರುವ ವಿದ್ಯಾರ್ಥಿನಿ ಕಲ್ಯಾಣಿ ಮತ್ತು ಎಂಎ ಕನ್ನಡ ವಿದ್ಯಾರ್ಥಿ ದಾಸಣ್ಣ ವಿಚಾರ ಮಂಡಿಸಿದರು.



**ಕುಪ್ಪಳ್ಳಿ ಶಿಬಿರದಲ್ಲಿ ದಾಸಣ್ಣ ತಮ್ಮ ಅಭಿಪ್ರಾಯ ಮಂಡಿಸುತ್ತಿರುವುದು**



**ನಿಕರಾಗುವಾ ದೇಶದ ಅಧ್ಯಕ್ಷ ಡ್ಯಾನಿಯೆಲ್ ಆರ್ತೆಗಾ ಮತ್ತು ಅವರ ಪತ್ನಿ**

**ನವೆಂಬರ್ 12ರಂದು** 'ನಿಕರಾಗುವಾ ದೇಶ ಮತ್ತು ಅಲ್ಲಿನ ಕ್ಷಿಪ್ರ ಬದಲಾವಣೆಗಳು' ವಿಷಯದ ಮಹತ್ವವನ್ನು ತಿಳಿದುಕೊಳ್ಳಲಾಯಿತು. ಅಧ್ಯಕ್ಷರ ಆಡಳಿತ ವೈಖರಿ, ಅಲ್ಲಿನ ಜನರಲ್ಲಿ ಮೂಡಿರುವ ಅಸಂತೋಷ, ಅದಕ್ಕೆ ಕಾರಣಗಳು ಇತ್ಯಾದಿ ವಿವರಗಳನ್ನು ಅರ್ಥಮಾಡಿಕೊಳ್ಳಲಾಯಿತು.

**ನವೆಂಬರ್15ರಂದು** 'ಸಮಾಜವಾದ ಕುರಿತು ಸ್ಪಷ್ಟತೆ ಪಡೆದುಕೊಳ್ಳಲು ಕೆಲವು ಪ್ರಶ್ನೆಗಳು' ಎಂಬ ವಿಷಯ ಕುರಿತು ಚರ್ಚಿಸಲಾಯಿತು. ಸಮಾಜವಾದಿ ಆಂದೋಲನ ಎದುರಿಸಿದ ಕೆಲವು ಸಂಕೀರ್ಣ ಸಮಸ್ಯೆಗಳ ಬಗೆಗಿನ ಪ್ರಶ್ನೆಗಳ ಬಗ್ಗೆ ವಿಷಯ ಹಂಚಿಕೊಳ್ಳಲಾಯಿತು.

ಅಕ್ಟೋಬರ್ 5ರಂದು ಗ್ರಾಮ ಪಂಚಾಯತಿ ಬಗ್ಗೆ ನಡೆಸಿದ ಚರ್ಚೆ ಸಂದರ್ಭದಲ್ಲಿ ಕೇರಳದ ಒಂದು ಗ್ರಾಮ ಪಂಚಾಯತ್ ಚಿತ್ರ ಹಾಕಿ, ಹೀಗೆ ನಮ್ಮಲ್ಲೂ ಗ್ರಾಮ ಪಂಚಾಯತಿ ಇದೆಯೆ? ಎಂದು ಕೇಳಲಾಗಿತ್ತು.

ಇದಕ್ಕೆ ಉತ್ತರವಾಗಿ **ಚಿತ್ರದುರ್ಗದ ರಘು** ಅವರು ಬುರುಜಿನರೊಪ್ಪ ಗ್ರಾಮ ಪಂಚಾಯತಿ ಚಿತ್ರವನ್ನು ವಾಟ್ಸ್ಯಾಪ್ ಗುಂಪಿನಲ್ಲಿ ಹಾಕುವ ಮೂಲಕ ಉತ್ತಮ ಸ್ಪಂದನೆಯನ್ನು ನೀಡಿದರು.




**ಬುರುಜಿನರೊಪ್ಪ ಗ್ರಾಮ ಪಂಚಾಯತಿ**

**ನವೆಂಬರ್** ತಿಂಗಳಲ್ಲಿ ಕರ್ನಾಟಕ ಸಮಾಜವಾದಿ ವೇದಿಕೆ ಸಂಪರ್ಕಕ್ಕೆ ಆಕಸ್ಮಿಕವಾಗಿ ಇಬ್ಬರು ಯುವಕರು ಬಂದರು. ಇವರು ಅಜ್ಮೀರ ಪಾಷಾ ಮತ್ತು ದಾಮೋದರನ್. ಇಬ್ಬರೂ ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಅಜ್ಮೀರ್ ಪಾಷಾ ವಿಶೇಷವಾಗಿ ಸಮಾಜವಾದದ ಬಗ್ಗೆ ಅಪಾರ ಕಾಳಜಿ ತೋರಿದರು.

ಇವರು ನವೆಂಬರ್ 16ರಂದು ಸಮಾಜವಾದ ಕುರಿತು ಕೆಲವು ಪ್ರಶ್ನೆಗಳನ್ನು ಹಾಕಿ, ಅವುಗಳಿಗೆ ಉತ್ತರಗಳನ್ನೂ ನೀಡಿದರು. ಅವು ಹೀಗಿವೆ:



## ಸಮಾಜವಾದಿ ಯಾರು?

**ಪ್ರಶ್ನೆ: ಸಮಾಜವಾದಿ ಎಂದರೆ ಯಾರು?**

**ಉತ್ತರ:** ಸಮಾಜವಾದಿ ಎಂದರೆ ಮಾನವತಾವಾದಿ. ಸಮಾಜದಲ್ಲಿನ ಪ್ರತಿಯೊಬ್ಬರಿಗೂ ತನ್ನಂತೆಯೇ ಸರಿಸಮಾನವಾದ ಸ್ವಾತಂತ್ರ್ಯ, ಹಕ್ಕು, ಕರ್ತವ್ಯ, ಜವಾಬ್ದಾರಿ ಮತ್ತು ಪ್ರಶ್ನೆ ಮಾಡುವ, ಅಹಿಂಸಾತ್ಮಕವಾಗಿ ಪ್ರತಿಭಟಿಸುವ ಅವಕಾಶ–ಹಕ್ಕುಗಳು ಇವೆ ಎಂದು ಒಪ್ಪಿದವರು ಮತ್ತು ಪ್ರತಿಪಾದನೆ ಮಾಡುವವರು.

**ಪ್ರಶ್ನೆ: ಸಮಾಜವಾದಿಯ ಗುಣಲಕ್ಷಣಗಳು ಯಾವುವು?**

**ಉತ್ತರ:** ಮೊದಲನೇ ಲಕ್ಷಣ ಎಂದರೆ ಸಮಾಜವಾದಿಗೆ ಕೇಳಿಸಿಕೊಳ್ಳುವ (ತಾಳ್ಮೆ, ಸಹನೆ) ಗುಣ ಇರಬೇಕು. ಸಮಾಜವಾದಿ ಅಧಿಕಾರದಲ್ಲಿರಲಿ ಅಥವಾ ಇಲ್ಲದಿರಲಿ, ಅವರು ದಮನಿತರ, ಅಶಕ್ತರ ಸಮಸ್ಯೆಗಳನ್ನು ಕೇಳಿಸಿಕೊಳ್ಳಬೇಕು. ವಿವೇಚನೆ/ವಿವೇಕದಿಂದ ಸಮಸ್ಯೆಗಳನ್ನು ಪರಿಹರಿಸಬೇಕು; ಎಲ್ಲರ ಹಕ್ಕುಗಳಿಗೆ ಗೌರವ ನೀಡಬೇಕು. ಸಮಾನ ಅವಕಾಶಗಳನ್ನು ಒದಗಿಸಬೇಕು. ಮಾನವತೆ (ಕ್ಷಮೆ, ತಾಳ್ಮೆ, ಕರುಣೆ) ಎಲ್ಲ ಗುಣಗಳನ್ನು ಹೊಂದಿರಬೇಕು.

**ಪ್ರಶ್ನೆ: ಪ್ರತಿಭಟನೆಯ ರೀತಿ?**

**ಉತ್ತರ:** ಅನ್ಯಾಯ ಆಗುತ್ತಿರುವುದು ಕಂಡು ಬಂದಾಗ ಸಮಾಜವಾದಿ ಯಾವತ್ತೂ ಅಹಿಂಸಾತ್ಮಕವಾಗಿ ಪ್ರತಿಭಟಿಸಬೇಕು. ಮಾಧ್ಯಮಗಳನ್ನು ಬಳಸಿಕೊಳ್ಳಬೇಕು. ಜನರನ್ನು ಅಂದರೆ ವಿದ್ಯಾರ್ಥಿಗಳನ್ನು, ಯುವಜನರನ್ನು, ರೈತರನ್ನು, ಕಾರ್ಮಿಕರನ್ನು, ಕೂಲಿಕಾರರನ್ನು, ಶಿಕ್ಷಕರನ್ನು ಹೀಗೆ ಪ್ರತಿಯೊಂದು ವರ್ಗದವರನ್ನು ಸಂಘಟನೆ ಮಾಡಬೇಕು. ಕಾನೂನಾತ್ಮಕವಾಗಿ ಹೋರಾಟ ಮಾಡಬೇಕು.

**ಪ್ರಶ್ನೆ: ಸಮಾಜವಾದವನ್ನು ಪ್ರಸಾರ ಮಾಡುವುದು ಹೇಗೆ?**

ಉತ್ತರ: ಸಮಾಜವಾದಿಯು ಮಾನವತೆಯ ಪರಿಮಳವನ್ನು ಹಂಚಬೇಕು. ತನ್ನ ಸ್ನೇಹಿತರಲ್ಲಿ, ಸಂಬಂಧಿಕರಲ್ಲಿ, ಆತ್ಮೀಯರಲ್ಲಿ, ತನ್ನ ಸಂಪರ್ಕಕ್ಕೆ ಬರುವ ಎಲ್ಲರಲ್ಲಿ ಸಮಾಜವಾದದ ಮಹತ್ವವನ್ನು ತಿಳಿಸಿಕೊಡಬೇಕು. ಸಮಾಜವಾದದ ಕಂಪನ್ನು ಗಟ್ಟಿಗೊಳಿಸಬೇಕು. ಗ್ರಂಥಾಲಯ, ಚರ್ಚಾಕೂಟಗಳಲ್ಲಿ ಸಮಾಜವಾದ ಕುರಿತು ತಿಳಿಸಬೇಕು; ಇನ್ನೊಬ್ಬರ ಅಭಿಪ್ರಾಯ ಸಮಾಜವಾದದ ಬಗ್ಗೆ ಏನಿದೆ ಎಂಬುದನ್ನೂ ತಿಳಿದುಕೊಳ್ಳಬೇಕು. ಅವರು ಹೇಳುವುದು ಅರ್ಥಪೂರ್ಣ ಇರುವುದಾದಲ್ಲಿ ಅದನ್ನು ಒಪ್ಪಿಕೊಳ್ಳಬೇಕು. ತಮ್ಮಲ್ಲಿ ಅಳವಡಿಸಿಕೊಳ್ಳಬೇಕು. ಅವರಲ್ಲಿ ತಪ್ಪು ಅಭಿಪ್ರಾಯ ಮೂಡಿದ್ದರೆ, ಅದನ್ನು ನಿವಾರಿಸಬೇಕು. ಈ ಮೂಲಕ ಸಮಾಜವಾದವನ್ನು ಗಟ್ಟಿಯಾಗಿ ನೆಲೆಯೂರಿಸಬೇಕು. ಸಮಾಜವಾದಿಯು ತಾಳ್ಮೆಯಿಂದ ವಿಷಯ ಮನಗಾಣಿಸಿ ಕೊಡಬೇಕು. ಜನರ ಅಭಿಪ್ರಾಯವನ್ನು ಕ್ರೋಢೀಕರಿಸಬೇಕು. ●

---

**ನವೆಂಬರ್ 17ರಂದು** 'ಬೀಚಿ ಸಾಹಿತ್ಯದಲ್ಲಿ ವೈಚಾರಿಕತೆ' ವಿಷಯ ಕುರಿತು ಶಿವಪ್ರಸಾದ್ ಎಸ್.ಟಿ. ಶಿಕ್ಷಕರು ದೊಡ್ಡಬಳ್ಳಾಪುರ ಇವರು ವಿಚಾರ ಮಂಡಿಸಿದರು.

ಬೀಚಿ ಅವರನ್ನು ಕೇವಲ ಹಾಸ್ಯ ಸಾಹಿತಿ ಎಂದಷ್ಟೇ ನೋಡಬೇಕಿಲ್ಲ.



ಶಿವಪ್ರಸಾದ್ ಎಸ್. ಟಿ.

ಅವರು ಅಪೂರ್ವ ವಿಚಾರವಂತಿಕೆಯನ್ನು ಮೆರೆದಿದ್ದಾರೆ ಎಂದು ತಿಳಿಸಿ ಇದಕ್ಕೆ ಹಲವಾರು ಉದಾಹರಣೆಗಳನ್ನು ಬೀಚಿ ಸಾಹಿತ್ಯ ಕೃತಿಗಳಿಂದ ನೀಡಿದರು.

**ನವೆಂಬರ್ 24ರಂದು** 'ವಚನ ಪಿತಾಮಹ ಹಳಕಟ್ಟಿ ಅವರ ಚಿಂತನೆ' ವಿಷಯ ಕುರಿತು ಗುರುರಾಜ ಮನಹಳ್ಳಿ ಇವರು ತಿಳಿಸಿಕೊಟ್ಟರು.

**ನವೆಂಬರ್ 29ರಂದು** 'ಸಂವಿಧಾನದಲ್ಲಿ ಸಮಾಜವಾದಿ ಅಂಶಗಳು ಮತ್ತು ಮುಂಬರುವ ಸಮಾಜವಾದಿ ವಿಚಾರ ಶಿಬಿರ' ಕುರಿತ ಮಾಹಿತಿಯನ್ನು ಹಂಚಿಕೊಳ್ಳಲಾಯಿತು.

---

## ಗೂಗಲ್ ಮೀಟ್ ಡಿಸೆಂಬರ್ ಸಭೆಗಳು

**ಡಿಸೆಂಬರ್ 1**ರಂದು ಬಹುತ್ವ ಮತ್ತು ಕರ್ನಾಟಕ ಸಮಾಜವಾದಿ ವೇದಿಕೆ ಸಂಯುಕ್ತ ಆಶ್ರಯದಲ್ಲಿ ನಡೆದ ಗೂಗಲ್ ಮೀಟ್ ಸಭೆಯಲ್ಲಿ 'ಜಾತಿ–ವರ್ಗಗಳ ಕದನ: ತೇಜಸ್ವಿ ವಿಚಾರಗಳು' ಎಂಬ ವಿಷಯ ಕುರಿತು ಬೆಂಗಳೂರಿನ ಶುಶ್ರೂಷಕಿ ಆಶಾಬಾಯಿ ಆರ್. ಮಾತನಾಡಿದರು.

**ಡಿಸೆಂಬರ್ 10**ರಂದು 'ಬರ್ಮಾ(ಮ್ಯಾನ್ಮಾರ್)' ವಿಷಯವನ್ನು ಹಂಚಿಕೊಳ್ಳಲಾಯಿತು.

**ಡಿಸೆಂಬರ್ 13**ರಂದು 'ಬೆಂಗಳೂರಿನಲ್ಲಿ ನಡೆದ ಸಮಾಜವಾದಿ ಶಿಬಿರದಲ್ಲಿ ನನ್ನ ಅನುಭವ' ವಿಷಯ ಕುರಿತು ಇಬ್ಬರು ಕಾರ್ಯಕರ್ತರು ಧಾರವಾಡದ ವಿದ್ಯಾರ್ಥಿ ಮುರ್ತೂಜಾ ಮತ್ತು ಬೆಂಗಳೂರಿನ ಐಟಿ ಉದ್ಯೋಗಿ ಶೃತಿಲಾ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.



**ಆಶಾಬಾಯಿ ಆರ್.**
ಶುಶ್ರೂಷಕಿ, ಬೆಂಗಳೂರು

**ಡಿಸೆಂಬರ್ 15**ರಂದು ಬಹುತ್ವ ವೇದಿಕೆ ಮತ್ತು ಕರ್ನಾಟಕ ಸಮಾಜವಾದಿ ವೇದಿಕೆ ಜಂಟಿಯಾಗಿ 'ರಾಷ್ಟ್ರಕವಿ ಕುವೆಂಪು ಅವರ ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಕಾಣುವ ಜೀವನ ದರ್ಶನ' ವಿಷಯ ಕುರಿತು ಮೈಸೂರಿನ ಫ್ಯಾಷನ್ ಡಿಸೈನರ್ **ಅಕ್ಷತಾ ಶಂಕರ್** ಹಲವು ಮಹತ್ವದ ಅಂಶಗಳನ್ನು ತಿಳಿಸಿದರು.

**ಡಿಸೆಂಬರ್ 17**ರಂದು 'ಪ್ರಥಮ ಮಹಿಳಾ ಅಧ್ಯಕ್ಷರನ್ನು ಕಂಡ ಹೊಂಡುರಾಸ್ ದೇಶ' ಕುರಿತು ವಿಚಾರ ವಿನಿಮಯವನ್ನು ಮಾಡಿಕೊಳ್ಳಲಾಯಿತು.

**ಡಿಸೆಂಬರ್ 20**ರಂದು, "ಸಮಾಜವಾದಿ ವಿಚಾರ ಎಂದರೇನು? ಅದನ್ನು ವಿದ್ಯಾರ್ಥಿ ಯುವಜನರ ಬಳಿಗೆ ಒಯ್ಯುವ ಅವಶ್ಯಕತೆ ಇದೆಯೆ? ಹೌದಾದರೆ, ಅದಕ್ಕಾಗಿ ನಾವು ಏನು ಮಾಡಬೇಕು?' ಎಂಬ ಬಗ್ಗೆ ಚರ್ಚಿಸಲಾಯಿತು.



**ಅಕ್ಷತಾ ಶಂಕರ್**

**ಚಿತ್ರದುರ್ಗ** ಜಿಲ್ಲೆಯ ಉತ್ಸಾಹಿ ಯುವ ಕಾರ್ಯಕರ್ತ **ರಘು.** ಇವರು ಕರ್ನಾಟಕ ಸಮಾಜವಾದಿ ವೇದಿಕೆಯ ಕೆಲವು ಸಭೆಗಳಲ್ಲಿ ಭಾಗವಹಿಸಿದವರು. 'ಯುವ ಧ್ವನಿ' ಪತ್ರಿಕೆಯ ಪ್ರತಿಗಳನ್ನು ನೀವು ನಿಮ್ಮ ಊರಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶಿಕ್ಷಕರಿಗೆ ಮುಟ್ಟಿಸುವಿರಾ?' ಎಂದು ಕೇಳಿದಾಗ, ಕೂಡಲೇ ಒಪ್ಪಿದರು. ಶಾಲಾ ಶಿಕ್ಷಕರಿಗೆ ಪ್ರತಿ ನೀಡಿದರು. ಅಲ್ಲಿನ ಶಿಕ್ಷಕರ ಜೊತೆ ನಿರಂತರ ಸಂಪರ್ಕ ಇಟ್ಟುಕೊಳ್ಳಲೂ ಸಮ್ಮತಿಸಿದರು. (**ಕೆಳಗೆ:** ತುರುವನೂರಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ)





**ಡಿಸೆಂಬರ್ 22**ರಂದು ಬಹುತ್ವ ವೇದಿಕೆ ಮತ್ತು ಕರ್ನಾಟಕ ಸಮಾಜವಾದಿ ವೇದಿಕೆ ಜಂಟಿಯಾಗಿ ಲೇಖಕ ವಸುಧೇಂದ್ರ ಅವರ 'ಹರಿ ಚಿತ್ತ ಸತ್ಯ' ಕಾದಂಬರಿ ಕುರಿತು



**ಜಿ. ಲೋಕೇಶ ಶಾಲಾಚ**

ಚಿಕ್ಕಬಳ್ಳಾಪುರ ಜಿಲ್ಲೆಯ ಶಿಕ್ಷಕರಾದ ಜಿ. ಲೋಕೇಶ್ ಶಾಲಾಚ ಅವರು ಉಪನ್ಯಾಸ ನೀಡಿದರು. ಜೀವನದ ವಿವಿಧ ಘಟ್ಟಗಳಲ್ಲಿ ನಾವು ಹೇಗೆ ಪರಿಸ್ಥಿತಿಯ ಕೂಸುಗಳಾಗುತ್ತೇವೆ ಎಂಬುದನ್ನು ಕಾದಂಬರಿ ನಿರೂಪಿಸುವುದನ್ನು ಅವರು ತಿಳಿಸಿದರು.

**ಡಿಸೆಂಬರ್ 27ರಂದು** 'ಸಮಾಜವಾದಿ ವಿಚಾರ ಪ್ರಸಾರ ಮಾಡಲು ಸಮಾಜವಾದಿ ವೇದಿಕೆ ಘಟಕಗಳನ್ನು ರಚಿಸಬಹುದೆ?' ಎಂಬ ವಿಷಯ ಕುರಿತು ಎಲ್ಲಾ ಮಿತ್ರರ ಸಲಹೆಗಳನ್ನು ಕೋರುವುದಕ್ಕಾಗಿ ಸಭೆಯನ್ನು ನಡೆಸಲಾಯಿತು.

**ಡಿಸೆಂಬರ್ 29**ರಂದು ಬಹುತ್ವ ವೇದಿಕೆ ಮತ್ತು ಕರ್ನಾಟಕ ಸಮಾಜವಾದಿ ವೇದಿಕೆ ಸಭೆಯಲ್ಲಿ 'ದೇವನೂರ ಮಹಾದೇವ ಅವರ ಒಡಲಾಳ ಕೃತಿ ಬಿಚ್ಚಿಡುವ ಬದುಕು' ವಿಷಯ ಕುರಿತು ದಾವಣಗೆರೆ ಜಿಲ್ಲೆ ಸಂತೆ ಬೆನ್ನೂರಿನ ಪದವೀಧರ ಶಿಕ್ಷಕರಾದ ಮಾರುತಿ ವಿಷಯ ಮಂಡಿಸಿದರು.



**ಎಂ. ಮಾರುತಿ**

**ಡಿಸೆಂಬರ್ 31**ರಂದು 'ವಿಶ್ವ ಶಾಂತಿಗೆ ಅಪಾಯ ಒದಗಲು ಕಾರಣವಾಗಿರುವ ಉಕ್ರೇನ್' ಎಂಬ ವಿಷಯದ ಮಹತ್ವದ ಬಗ್ಗೆ ಮತ್ತು ಆ ದೇಶದ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು.

## 2021ರ ಜುಲೈನಿಂದ ಡಿಸೆಂಬರ್‌ವರೆಗೆ ಕರ್ನಾಟಕ ಸಮಾಜವಾದಿ ವೇದಿಕೆ ಸ್ವೀಕರಿಸಿದ ಧನಸಹಾಯ

| | | |
|---|---|---|
| | 2021 ಪ್ರಥಮ ಅರ್ಧ ವರ್ಷದ ಉಳಿಕೆ ರೂ. 19,430/– | |
| 1. ಉಮಾಶಂಕರ್ | ಮಾಸಿಕ ರೂ. 500/–ರಂತೆ | ರೂ. 3,000/– |
| 2. ಗಜೇಂದ್ರ ಟಿ. | ಮಾಸಿಕ ರೂ. 1000/–ರಂತೆ | ರೂ. 6,000/– |
| 3. ಶಾರದಾ | ಮಾಸಿಕ ರೂ. 1000/–ರಂತೆ | ರೂ. 6,000/– |
| 4. ಅನಂತ್ ಪದ್ಮನಾಭನ್ | ಮಾಸಿಕ ರೂ. 500/–ರಂತೆ | ರೂ. 3,000/– |
| 5. ಎಚ್.ವಿ. ಮಂಜುನಾಥ್ | ಮಾಸಿಕ ರೂ. 500/–ರಂತೆ | ರೂ. 3,000/– |
| 6. ಡಾ॥ ವಿಜಯಾ | ಮಾಸಿಕ ರೂ. 500/–ರಂತೆ | ರೂ. 3.000/– |
| 7. ಎಚ್.ಎಸ್. ಪುಷ್ಪಾ | ಮಾಸಿಕ ರೂ. 500/–ರಂತೆ | ರೂ. 3,000/– |
| 8. ಮಂಗ್ಳೂರ ವಿಜಯ | ಮಾಸಿಕ ರೂ. 1000/–ರಂತೆ | ರೂ. 6,000/– |
| 9. ಸುಷ್ಮಿತಾ | ಮಾಸಿಕ ರೂ. 500/–ರಂತೆ | ರೂ. 3,000/– |
| 10. ಅನುಪಮಾ ವಿ.ಎಸ್. | ಮಾಸಿಕ ರೂ. 500/–ರಂತೆ | ರೂ. 3,000/– |
| 11. ದಾಮೋದರನ್ | ಡಿಸೆಂಬರ್ ತಿಂಗಳಲ್ಲಿ ನೀಡಿದ್ದು | ರೂ. 500/– |
| 12. ಸುಪ್ರೀತಾ | ಮಾಸಿಕ ರೂ.200/–ರಂತೆ | ರೂ. 1,200/– |
| 13. ಅಪೂರ್ವಾ ವಿ. ಎಸ್. | ಮಾಸಿಕ ರೂ.1000/–ರಂತೆ | ರೂ. 6,000/– |
| 14. ಅಜ್‌ಮೀರ್ ಪಾಷಾ | ಡಿಸೆಂಬರ್ ತಿಂಗಳಲ್ಲಿ ನೀಡಿದ್ದು | ರೂ. 500/– |
| | | ಒಟ್ಟು ರೂ. 66,630/– |

## 2021ರ ಜುಲೈನಿಂದ ಡಿಸೆಂಬರ್‌ವರೆಗೆ ಭರಿಸಲಾದ ವೆಚ್ಚ ವಿವರಗಳು

1. ಕರ್ನಾಟಕ ಸಮಾಜವಾದಿ ವೇದಿಕೆ ಹಾವೇರಿ ಜಿಲ್ಲಾ ಸಮನ್ವಯಕಾರ ಕರಿಬಸಪ್ಪ ಅವರಿಗೆ ಜುಲೈ ತಿಂಗಳಲ್ಲಿ ನೀಡಲಾದ ಗೌರವಧನ (ಜುಲೈ ನಂತರ ಇವರು ಬೇರೆ ಕೆಲಸವನ್ನು ವಹಿಸಿಕೊಂಡಿರುತ್ತಾರೆ) ರೂ. 2,000/–
2. ಕರ್ನಾಟಕ ಸಮಾಜವಾದಿ ವೇದಿಕೆ ಬೆಂಗಳೂರು ಕೇಂದ್ರದಲ್ಲಿ ವೇದಿಕೆಯ ಸಂಪರ್ಕ ಮತ್ತು ಖರ್ಚು ವಿವರಗಳನ್ನು ದಾಖಲಿಸುವ ಸುಷ್ಮಿತಾ ಅವರಿಗೆ ಗೌರವಧನ (ಮಾಸಿಕ ರೂ.2000/–ನಂತೆ ಆರು ತಿಂಗಳಿಗೆ) ರೂ. 12,000/–
3. ಬೆಂಗಳೂರಿನ ಗಾಂಧಿಭವನದಲ್ಲಿ ನಡೆದಿದ್ದ ಸಮಾಜವಾದಿಗಳ ಸಮಾಗಮ ಎಂಬ ಕಾರ್ಯಕ್ರಮ ಸಂದರ್ಭದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಹಿರಿಯ–ಕಿರಿಯ ಸಮಾಜವಾದಿಗಳ ಪಟ್ಟಿಯನ್ನು ಸಿದ್ಧಪಡಿಸಿ, ಅಂತಿಮ ವಿಳಾಸಗಳ ಪಟ್ಟಿ ಸಿದ್ಧಪಡಿಸಿದ ಅಂಬಿಕಾ ಗೌಡ ಅವರಿಗೆ ಗೌರವ ಧನ ರೂ. 1,000/–
4. ಇವರ ಮೊಬೈಲ್ ನಂಬರ್‌ಗಳಿಗೆ ಫೋನ್ ಮಾಡಿ, ಸಮಾಜವಾದಿ ವಿಚಾರ ಪ್ರಸಾರದಲ್ಲಿ ಆಸಕ್ತಿ ತೋರುವ ಬಗ್ಗೆ ಎಲ್ಲರನ್ನು ವಿನಂತಿಸಿ, ಇವರ ವಾಟ್ಸ್ಯಾಪ್ ಗುಂಪು ರಚಿಸುವ ಕೆಲಸಕ್ಕಾಗಿ ಅಂಬಿಕಾ ಗೌಡ ಅವರಿಗೆ ಗೌರವ ಧನ ರೂ. 1,000/–
5. ಮಹಾರಾಷ್ಟ್ರದ ಸೇವಾಗ್ರಾಮದಲ್ಲಿ ನಡೆದ ಸೋಷಲಿಸ್ಟ್ ಪಾರ್ಟಿ (ಇಂಡಿಯಾ) ಅಧಿವೇಶನಕ್ಕೆ ಹೋಗಿ ಬರಲು ಸೆಪ್ಟೆಂಬರ್ ತಿಂಗಳಲ್ಲಿ ಕಲಬುರಗಿ ಪತ್ರಕರ್ತ ವಿಕ್ರಮ್ ತೇಜಸ್ ಮತ್ತು ಇಬ್ಬರಿಗೆ ಪ್ರಯಾಣ ಮತ್ತು ಇತರ ವೆಚ್ಚ ರೂ. 3,000/–
6. ಕುಪ್ಪಳ್ಳಿಯಲ್ಲಿ ನಡೆದ ಸಮಾಜವಾದಿ ಶಿಬಿರದಲ್ಲಿ ಪಾಲ್ಗೊಳ್ಳಲು ಚಿತ್ರದುರ್ಗದಿಂದ ತೆರಳಿದ್ದ ಮೂವರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪುಸ್ತಕ ಖರೀದಿಸಲು ಪಡೆದ ನೆರವು ರೂ. 1,000/–
7. ಬೆಂಗಳೂರು ಸರ್ಕಾರಿ ಪದವಿ ಕಾಲೇಜಿನಲ್ಲಿ ಪ್ರಥಮ ಬಿಎ ಓದುತ್ತಿರುವ ವಿದ್ಯಾರ್ಥಿನಿ ಸೊಫಿಯಾಗೆ ನೆರವು ರೂ. 1,000/–
8. ಐಎಎಸ್ ಪರೀಕ್ಷೆ ಸಿದ್ಧಳಾಗುತ್ತಿರುವ ಚಾಮರಾಜನಗರ ಜಿಲ್ಲೆಯ ಆದಿವಾಸಿ ವಿದ್ಯಾರ್ಥಿನಿ ಸೌಮ್ಯಾಗೆ ನೆರವು ರೂ. 2,000/–
9. ಧಾರವಾಡದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವ ಮಂಡ್ಯದ ವಿದ್ಯಾರ್ಥಿನಿ ಚೈತ್ರಾಗೆ ನೆರವು ರೂ. 1,000/–
10. ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಪಿಎಚ್ ಡಿ ಅಂತಿಮ ವರ್ಷದ ವಿದ್ಯಾರ್ಥಿ ನಂದಕುಮಾರ್ ಅವರಿಗೆ ಲ್ಯಾಪ್‌ಟಾಪ್ ಕೊಡಿಸಲು ನೀಡಲಾದ ನೆರವು ರೂ. 8,000/–
11. ಹದಿನಾರು ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಕರುಗಳಿಗೆ 15 ಪುಸ್ತಕಗಳ ಒಂದೊಂದು ಸೆಟ್ ನೀಡಿದ್ದು(ಸೆಟ್ ಒಂದಕ್ಕೆ ರೂ. 160/–ರಂತೆ) ರೂ. 2,560/–
12. ಮ್ಯಾನ್ಯುಯೆಲ್ ಸ್ಕ್ಯಾವೆಂಜರ್ಸ್ ವಿಷಯದಲ್ಲಿ ಕೆಲಸ ಮಾಡುತ್ತಿರುವ ಬೆಂಗಳೂರಿನ ಸಾಮಾಜಿಕ ಕಾರ್ಯಕರ್ತರಾದ ಎಂ. ವೆಂಕಟೇಶ್ ಅವರಿಗೆ ನೀಡಲಾದ ನೆರವು ರೂ. 1,000/–
13. ಬೆಂಗಳೂರು ನಗರ ಜಿಲ್ಲೆಯ 12 ಪ್ರೌಢಶಾಲೆಗಳ ಶಿಕ್ಷಕರುಗಳಿಗೆ ನೀಡಲಾದ 15 ಪುಸ್ತಕಗಳ ಸೆಟ್ ಒಂದೊಂದು ಸೆಟ್ ನೀಡಿದ್ದು(ಸೆಟ್ ಒಂದಕ್ಕೆ ರೂ. 160/–ರಂತೆ) ರೂ. 1,920/–
14. ಗೂಗಲ್ ಮೀಟ್ ಸಭೆಗಳಿಗೆ ಆಹ್ವಾನಿತರಾಗಿದ್ದ 19 ಜನ ವಿಷಯ ಪರಿಣತರಿಗೆ ಪುಸ್ತಕಗಳನ್ನು ನೀಡಿದ್ದು ರೂ. 3,040/–
15. 'ಯುವ ಧ್ವನಿ' ಪತ್ರಿಕೆಯನ್ನು ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಯುವಜನರಿಗೆ ಪ್ರತಿ ತಿಂಗಳೂ ತಲುಪಿಸಿದ್ದು (ರೂ. 10/– ಮುಖಬೆಲೆ ಇರುವ 50 ಪತ್ರಿಕೆಗಳನ್ನು 6 ತಿಂಗಳು) ರೂ. 3,000/–
16. 'ಅರಿವು' ಪತ್ರಿಕೆಯನ್ನು ಡಿಸೆಂಬರ್ ತಿಂಗಳಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಯುವಜನರಿಗೆ ತಲುಪಿಸಿದ್ದು (ರೂ. 10/– ಮುಖಬೆಲೆ ಇರುವ 50 ಪತ್ರಿಕೆಗಳನ್ನು ಒಂದು ತಿಂಗಳು) ರೂ. 500/–
17. ಡಿಸೆಂಬರ್ 4–5, 2021ರಂದು ಏರ್ಪಡಿಸಿದ ಶಿಬಿರ ಸಂಘಟನೆಗೆ ಖರ್ಚಾದ ಹೆಚ್ಚುವರಿ ಮೊತ್ತ ರೂ. 8,600/–
18. ಈ ವರದಿ ಕರಡು ಪ್ರತಿ ಪರೀಕ್ಷಿಸಿದ ಮೇಘಾ ರಾಮದಾಸ್‌ಗೆ ಗೌರವಧನ ರೂ. 500/–
19. ಕರ್ನಾಟಕ ಸಮಾಜವಾದಿ ವೇದಿಕೆ ಮಂಡ್ಯ ಜಿಲ್ಲಾ ಶಾಖೆ ವಿತರಿಸಿದ 700 ಕಿರುಪುಸ್ತಕಗಳ ವೆಚ್ಚ ರೂ. 6,900/–
20. ಆರು ತಿಂಗಳ ಅವಧಿಯಲ್ಲಿ ಲೇಖನ ಸಾಮಗ್ರಿ, ಜೆರಾಕ್ಸ್, ಅಂಚೆ ವೆಚ್ಚ ಇತ್ಯಾದಿ ರೂ. 2,600/–

ಒಟ್ಟು ರೂ. ರೂ. 62,620/–

**ಸಂಕ್ಷಿಪ್ತದಲ್ಲಿ**

| | |
|---|---|
| ಸಂಗ್ರಹವಾದ ಧನಸಹಾಯ | ರೂ. 66,630/– |
| ವೆಚ್ಚವಾದ ಮೊತ್ತ | ರೂ. 62,620/– |
| ಉಳಿಕೆ | ರೂ. 4,010/– |

## ಕರ್ನಾಟಕ ಸಮಾಜವಾದಿ ವೇದಿಕೆ

### 4-5 ಡಿಸೆಂಬರ್ 2021ರಂದು ಬೆಂಗಳೂರಿನಲ್ಲಿ ನಡೆದ ಸಮಾಜವಾದಿ ವಿಚಾರ ಶಿಬಿರ

**ಕರ್ನಾಟಕ ಸಮಾಜವಾದಿ ವೇದಿಕೆ ವತಿಯಿಂದ ಶಿಬಿರವನ್ನು ಮಾಡುವ ವಿಚಾರ ಬಹಳ ತಿಂಗಳುಗಳಿಂದ ಇತ್ತು. ಈ ಹಿಂದೆ ಶಿಬಿರವನ್ನು ಏರ್ಪಡಿಸಿದ್ದು ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನಲ್ಲಿ. ಅಲ್ಲಿಗೆ ವೇದಿಕೆ ಪರವಾಗಿ ಮಂಗ್ಳೂರ ವಿಜಯ, ಹೈಕೋರ್ಟಿನ ನ್ಯಾಯವಾದಿ ಎಚ್.ವಿ.ಮಂಜುನಾಥ್ ಮತ್ತು ಬೆಂಗಳೂರು ದಲಿತ್ ಫೋರಮ್‌ನ ಟಿ. ಗಜೇಂದ್ರ ಭಾಗವಹಿಸಿದ್ದರು.**

**ಮತ್ತೊಂದು ಶಿಬಿರವನ್ನು ಏರ್ಪಾಟು ಮಾಡಬೇಕೆಂದಿರುವಾಗಲೇ, ಕೋವಿಡ್-19 ದಾಳಿ ಮಾಡಿ, ಎಲ್ಲಾ ಯೋಜನೆಗಳನ್ನು ಚೆಲ್ಲಾಪಿಲ್ಲಿ ಮಾಡಿಬಿಟ್ಟಿತು.**

**ಕೋವಿಡ್ ಹಾವಳಿ ತುಸು ಕಡಿಮೆ ಆಯಿತು ಎನಿಸಿದ ಬಳಿಕ ನಾಲ್ಕಾರು ಮಿತ್ರರ ಜೊತೆಗೆ ಸಮಾಲೋಚನೆ ನಡೆಸಿ, ಕರ್ನಾಟಕ ಸಮಾಜವಾದಿ ವೇದಿಕೆ ವತಿಯಿಂದ 2021ರ ಡಿಸೆಂಬರ್ 4-5ರಂದು ಶಿಬಿರ ಮಾಡಲು ನಿರ್ಧಾರ ಮಾಡಲಾಯಿತು.**

# ಶಿಬಿರದ ಸಂಕ್ಷಿಪ್ತ ವರದಿ

**ಶನಿವಾರ ಡಿಸೆಂಬರ್ 4**

ಡಿಸೆಂಬರ್ 4 ಶನಿವಾರ ಬೆಳಗ್ಗೆ 10ಗಂಟೆ ಹೊತ್ತಿಗೆ ಎಲ್ಲಾ ಶಿಬಿರಾರ್ಥಿಗಳು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ಇರುವ 'ಸ್ಫೂರ್ತಿಧಾಮ' ಕೇಂದ್ರವನ್ನು ತಲುಪಿದರು. ಎಲ್ಲರೂ ಉಪಾಹಾರ ಮುಗಿಸಿಕೊಂಡು 'ಸೆಮಿನಾರ್ ಹಾಲ್'ಗೆ ಬಂದು, ನೋಂದಣಿ ಮಾಡಿಕೊಂಡರು. ಅವರಿಗೆ ಬರೆಯಲು ಪ್ಯಾಡ್, ಪೆನ್, ಫೋಲ್ಡರ್‌ಗಳನ್ನು ನೀಡಲಾಯಿತು.

ಸಮಾಜಪರಿವರ್ತನೆಗೆ ಸಂಬಂಧಿಸಿದ ಎರಡು ಹಾಡುಗಳನ್ನು ಹೇಳಿದ ಬಳಿಕ, ಎಲ್ಲಾ ಶಿಬಿರಾರ್ಥಿಗಳು ತಮ್ಮನ್ನು ಪರಿಚಯಿಸಿಕೊಂಡರು.

ವೇದಿಕೆಗೆ ಉದ್ಘಾಟನಾ ಗೋಷ್ಠಿಯ ಅತಿಥಿಗಳನ್ನು ಆಹ್ವಾನಿಸಲಾಯಿತು. ವೇದಿಕೆಗೆ ಗಜೇಂದ್ರ, ಬೆಂಗಳೂರು ದಲಿತ್ ಫೋರಮ್ ಅಧ್ಯಕ್ಷರು ಮತ್ತು ಪ್ರೊ॥ ಹನುಮಂತ, ಹಿರಿಯ ಸಮಾಜವಾದಿ ಲೇಖಕರು ಆಗಮಿಸಿದರು. ಶಿಬಿರದ ಉದ್ದೇಶವನ್ನು ಮಂಗ್ಳೂರ ವಿಜಯ ತಿಳಿಸಿದರು.

**ಶಿಬಿರದ ಉದ್ಘಾಟನೆ**

ಶಿಬಿರದ ಉದ್ಘಾಟನೆಯನ್ನು ಮಾಡಿದ ಪ್ರೊ॥ ಹನುಮಂತ ಅವರು, ಸಮಾಜವಾದ ಕುರಿತ ವಿವಿಧ ವಿಷಯಗಳನ್ನು ತಿಳಿಸಿದರು. ಬಂಡವಾಳಶಾಹಿ, ಫ್ಯಾಸಿಸಂ, ಕಮ್ಯುನಿಸಂ ಮತ್ತು ಸೋಷಲಿಸಂ (ಸಮಾಜವಾದ) ಬಗ್ಗೆ ಅನೇಕ ಅಂಶಗಳನ್ನು ತಿಳಿಸಿ, ಸಮಾಜವಾದಿ ವಿಚಾರಗಳನ್ನು ಇಟ್ಟುಕೊಂಡು ಜೀವನ ನಡೆಸುವುದು ಹೇಗೆ ಎಂದು ತಿಳಿಸಿಕೊಟ್ಟರು. ನಂತರ, ಈ ಕುರಿತು ಶಿಬಿರಾರ್ಥಿಗಳು ಕೆಲವಾರು ಪ್ರಶ್ನೆಗಳನ್ನು ಕೇಳಿ, ತಮ್ಮಲ್ಲಿನ ಸಂದೇಹಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಿದರು.

**ಗೋಷ್ಠಿ**

ಗೋಷ್ಠಿಯ ಪ್ರಾರಂಭ ಆದಾಗ ಮತ್ತೊಂದು ಪರಿವರ್ತನೆ/ವಿಚಾರ ಗೀತೆಯನ್ನು ಹೇಳಲಾಯಿತು. ನಂತರ, ಮಂಗ್ಳೂರ ವಿಜಯ ಅವರು 'ಸಮಾಜವಾದಿ ಆಂದೋಲನದ ಇತಿಹಾಸ' ಕುರಿತು ವಿಷಯ ಮಂಡಿಸಿದರು. ಬುದ್ಧನ ಚಿಂತನೆಯ ಆಶಯ ಪೂರ್ಣವಾಗಿ ಸಮಾಜವಾದಿ ಆಗಿತ್ತು ಎಂದು ತಿಳಿಸಿದ ಅವರು, ಇತಿಹಾಸದ ವಿವಿಧ ಘಟ್ಟಗಳಲ್ಲಿ ಸಮಾಜವಾದಿ ಆಶಯವು ಪ್ರತಿಫಲನಗೊಂಡ ಬಗೆಯನ್ನು ವಿವರಿಸಿದರು. ವಚನ ಕಾಲ, ಭಕ್ತಿ ಪಂಥ, ನಾಥ ಪಂಥ, ಸೂಫಿ ಪಂಥ, ಜನಪದ ಚಿಂತನೆ ಹೀಗೆ ವಿವಿಧ ಮಜಲುಗಳಲ್ಲಿ ಸಮಾಜವಾದಿ ಆಶಯವು ಅಭಿವ್ಯಕ್ತಗೊಂಡಿದ್ದನ್ನು ಅವರು ಎಳೆಎಳೆಯಾಗಿ ಬಿಡಿಸಿಟ್ಟರು.

ಕಬೀರ, ಗುರು ನಾನಕ್, ಮಹಾತ್ಮಾ ಫುಲೆ, ರಾಮ ಮೋಹನ ರಾಯ್, ವಿವೇಕಾನಂದ, ಗಾಂಧಿ, ಅಂಬೇಡ್ಕರ್ ಮಾರ್ಗವಾಗಿ ಸಮಾಜವಾದಿ ಆಶಯವು ಹೇಗೆ ಜನ ಸಾಮಾನ್ಯರ ಹಿತವನ್ನು ಕುರಿತು ಸಮಾಜದ ಗಮನವನ್ನು ಸೆಳೆಯಿತು ಎಂದು ಅವರು ತಿಳಿಸಿದರು.

ಜಯಪ್ರಕಾಶ ನಾರಾಯಣ, ಆಚಾರ್ಯ ನರೇಂದ್ರ ದೇವ, ಕಮಲಾದೇವಿ ಚಟ್ಟೋಪಾಧ್ಯಾಯ, ರಾಮಮನೋಹರ ಲೋಹಿಯಾ, ಯೂಸೂಫ್ ಮೆಹರಾಲಿ, ಎಸ್. ಎಂ. ಜೋಶಿ, ಅಶೋಕ ಮೆಹ್ತಾ ಮುಂತಾದವರು 1934ರಲ್ಲಿ ಕಾಂಗ್ರೆಸ್ ಸಮಾಜವಾದಿ ಗುಂಪನ್ನು ರಚಿಸಿದ ಬಗ್ಗೆ ಮಾಹಿತಿ ನೀಡುತ್ತಾ, ಸಮಾಜವಾದವು ಭಾರತೀಯ ಸಾಮಾಜಿಕ/ಆರ್ಥಿಕ/ರಾಜಕೀಯ ಚಳವಳಿಯಾಗಿ ಬೆಳೆದು ಬಂದಿರುವುದನ್ನು ಅವರು ವಿವರಿಸಿದರು.

ಭಾರತದ ಅನೇಕ ಚಿಂತಕರನ್ನು, ಸಾಹಿತಿಗಳನ್ನು, ಕಲಾವಿದರನ್ನು ಸಮಾಜವಾದ ಪ್ರಭಾವಿಸಿರುವ ಜೊತೆಗೆ, ನಮ್ಮ ನಾಡಿನ ರಾಷ್ಟ್ರಕವಿ ಕುವೆಂಪು, ಶಾಂತವೇರಿ ಗೋಪಾಲಗೌಡ, ಡಾ॥ ಯು.ಆರ್.ಅನಂತಮೂರ್ತಿ, ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಪ್ರೊ॥ ಎಂ.ಡಿ. ನಂಜುಂಡ ಸ್ವಾಮಿ ಮುಂತಾದವರನ್ನೂ ಅದು ಆಕರ್ಷಿಸಿತು ಎಂದು ತಿಳಿಸಿದರು.

ಈ ಗೋಷ್ಠಿಯ ಕೊನೆಯಲ್ಲಿ ಶಿಬಿರಾರ್ಥಿಗಳು ಹಲವಾರು ಪ್ರಶ್ನೆಗಳನ್ನು ಕೇಳಿ, ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನಗಳನ್ನು ಮಾಡಿದರು.

ಮಧ್ಯಾಹ್ನ ಶಿಬಿರಾರ್ಥಿಗಳು ಮತ್ತು ಅತಿಥಿಗಳು ಊಟ ಮಾಡಿದ ಬಳಿಕ ವಿಶೇಷ ಸಮಾರಂಭ ನಡೆಯಿತು. ಅದುವೇ **'ಅರಿವು'** ಪತ್ರಿಕೆಯ ಬಿಡುಗಡೆ ಕಾರ್ಯಕ್ರಮ. (ಕೆಳಗೆ ಬಾಕ್ಸ್ ನೋಡಿ)

ಸಂಜೆ 4.30ಕ್ಕೆ ಚಹಾ ಸೇವಿಸಿ, ಶಿಬಿರಾರ್ಥಿಗಳು ಎರಡನೇ ಗೋಷ್ಠಿಗೆ ಸಜ್ಜಾದರು. ಆ ಗೋಷ್ಠಿಯಲ್ಲಿ ಮಂಗ್ಳೂರ ವಿಜಯ ಅವರು 'ಸಮಾಜವಾದಿ ಆಂದೋಲನ ಪರಿಚಯ' ವಿಷಯ ಕುರಿತು ಹೆಚ್ಚಿನ ವಿವರಗಳನ್ನು ನೀಡಿದರು.

ಸಮಾಜವಾದವು ಸಮಾನತೆ, ಸ್ವಾತಂತ್ರ್ಯ ಮತ್ತು ಬಂಧುತ್ವವನ್ನು ಒಳಗೊಂಡಿರುವಂಥದ್ದು. ಇದು ಬಹುತೇಕ ವಾಗಿ ನಮ್ಮ ಸಂವಿಧಾನದ ಆಶಯವನ್ನೇ ಹೊಂದಿದೆ. ಎಲ್ಲಾ



ಶಿಬಿರಾರ್ಥಿಗಳು (ಇನ್ನೊಂದು ಪಾರ್ಶ್ವನೋಟದ ಚಿತ್ರ)

ರೀತಿಯ ತಾರತಮ್ಯವನ್ನು ನಿರ್ಮೂಲನೆ ಮಾಡಬೇಕು. ಅವಕಾಶವಂಚಿತರಿಗೆ ವಿಶೇಷ ಸೌಲಭ್ಯಗಳು ದೊರಕಬೇಕು. ಬಹುತ್ವವನ್ನು ಕಾಪಾಡಿಕೊಳ್ಳಬೇಕು. ಜಾತಿ/ವರ್ಗ/ಲಿಂಗ ತಾರತಮ್ಯ ಹೇಗೆಲ್ಲಾ ಆಗುತ್ತಿದೆ; ಇದನ್ನು ತೊಡೆದು ಹಾಕುವ ಮಾರ್ಗೋಪಾಯಗಳು ಯಾವುವು ಎಂಬುದನ್ನು ಅವರು ವಿವರಿಸಿದರು.

ಪ್ರಜಾಪ್ರಭುತ್ವ ಅತ್ಯಂತ ಶ್ರೇಷ್ಠ ಮೌಲ್ಯ. ಯಾರೊಬ್ಬರ ಮೇಲೂ ನಮ್ಮ ಅಭಿಪ್ರಾಯ ಹೇರತಕ್ಕದ್ದಲ್ಲ ಎಂದು ತಿಳಿಸಿದ ಅವರು, ಇದನ್ನು ಮನವರಿಕೆ ಮಾಡಿಕೊಡಲು ಹತ್ತಾರು ಸಮಕಾಲೀನ ಉದಾಹರಣೆಗಳನ್ನು ನೀಡಿ, ವಿಷಯವನ್ನು ಶಿಬಿರಾರ್ಥಿಗಳಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು.

ಈ ಗೋಷ್ಠಿಯಲ್ಲಿ ತಾವು ಕೇಳಿಸಿಕೊಂಡ ವಿವಿಧ ವಿಷಯಗಳ ಬಗ್ಗೆ ಶಿಬಿರಾರ್ಥಿಗಳು ಪ್ರಶ್ನೆಗಳನ್ನು ಕೇಳುವ ಮೂಲಕ ಚರ್ಚೆ ನಡೆಸಿದರು.

ನಂತರ, ಎಲ್ಲಾ ಶಿಬಿರಾರ್ಥಿಗಳು 'ಸ್ಫೂರ್ತಿಧಾಮ' ಕೇಂದ್ರ ಆವರಣದಲ್ಲಿ ವಾಕ್ ಮಾಡಿ, ಅಲ್ಲಿನ ವಿವಿಧ ಸೌಲಭ್ಯಗಳನ್ನು ವೀಕ್ಷಿಸಿದರು. ಬುದ್ಧ ಧ್ಯಾನ ಮಂದಿರ, ಬೃಹತ್ ಅಂಬೇಡ್ಕರ್ ಪ್ರತಿಮೆ, ಬುದ್ಧನ ಮೂರ್ತಿಯಿದ್ದ ಕೆರೆ, ಸಭಾಂಗಣ ಮುಂತಾದವುಗಳನ್ನು ವೀಕ್ಷಿಸುತ್ತಾ, ಅಲ್ಲಿನ ನೈಸರ್ಗಿಕ ಪರಿಸರದಲ್ಲಿ ವಿಶೇಷ ಆನಂದವನ್ನು ಆಸ್ವಾದಿಸಿದರು.

ಮರಳಿ ಸೆಮಿನಾರ್ ಹಾಲ್‌ಗೆ ಬಂದ ಶಿಬಿರಾರ್ಥಿಗಳು, ಆ ದಿನ ನಡೆದ ಎಲ್ಲಾ ಗೋಷ್ಠಿಗಳಲ್ಲಿ ವ್ಯಕ್ತವಾದ ವಿಷಯಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

ರಾತ್ರಿ ಊಟದೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯವಾಯಿತು.

**ಭಾನುವಾರ 5 ಡಿಸೆಂಬರ್ 2021**

ಎಲ್ಲಾ ಶಿಬಿರಾರ್ಥಿಗಳು ಉಪಾಹಾರ ಸೇವಿಸಿ, ಸೆಮಿನಾರ್ ಹಾಲ್‌ಗೆ ಬಂದರು. ಮೊದಲನೇ ಗೋಷ್ಠಿ 'ಸಮಾಜವಾದ ಮತ್ತು ಸಾಮಾಜಿಕ ನ್ಯಾಯ' ಎಂಬುದಾಗಿತ್ತು. ಈ ಗೋಷ್ಠಿಯಲ್ಲಿ ಗಜೇಂದ್ರ ಟಿ. ಇವರು ವಿಷಯ ಮಂಡನೆ ಮಾಡಿದರು.

'ಸಮಾಜವಾದ ಎಂಬುದು ಸಂಪೂರ್ಣವಾಗಿ ಸಾಮಾಜಿಕ ನ್ಯಾಯವನ್ನು ಒಳಗೊಂಡಿದೆ' ಎಂದು ತಿಳಿಸಿದ ಅವರು, 'ಸಮಾಜವಾದಿಗಳು ಪ್ರಾರಂಭದಿಂದಲೂ ಸಾಮಾಜಿಕ ನ್ಯಾಯ ವಿಷಯವನ್ನು ಗಟ್ಟಿಯಾಗಿ ಪ್ರತಿಪಾದಿಸುತ್ತಾ ಬಂದರು' ಎಂದು ತಿಳಿಸಿದರು.

ವಿಶೇಷವಾಗಿ, ರಾಮಮನೋಹರ ಲೋಹಿಯಾ ಅವರು ಈ ವಿಷಯವನ್ನು ಅತ್ಯಂತ ಧೃಡತೆಯಿಂದ ಸಮಾಜವಾದಿ ಆಂದೋಲನದ ಉದ್ದಕ್ಕೂ ಒತ್ತಿ ಹೇಳುತ್ತಾ ಬಂದಿದ್ದನ್ನು ತಿಳಿಸಿದ ಅವರು, ಡಾ॥ ಬಿ.ಆರ್.ಅಂಬೇಡ್ಕರ್ ಅವರು ಸಮಾಜವಾದಿಗಳ ಬಗ್ಗೆ ಹೇಳಿದ್ದ ಮಾತುಗಳನ್ನು ಉದಾಹರಿಸಿದರು.

'ನಾನೂ ಸಮಾಜವಾದಿ. ನನ್ನದು ಪ್ರಭುತ್ವ ಸಮಾಜ ವಾದ. ನಾನು ಕಾಂಗ್ರೆಸ್ ಹೊರಗೆ ಇದ್ದೇನೆ; ಸಮಾಜವಾದಿಗಳು ಕಾಂಗ್ರೆಸ್ ಒಳಗೆ ಇದ್ದಾರೆ. ಇದು ಮುಖ್ಯ ವ್ಯತ್ಯಾಸ' ಎಂದು ಡಾ॥ ಅಂಬೇಡ್ಕರ್ ತಿಳಿಸಿದ್ದನ್ನು ಅವರು ಶಿಬಿರಾರ್ಥಿಗಳ ಗಮನಕ್ಕೆ ತಂದರು.

ವಿಚಾರ ಮಂಡನೆ ನಂತರ ಶಿಬಿರಾರ್ಥಿಗಳು ಎತ್ತಿದ ಹಲವಾರು ಪ್ರಶ್ನೆಗಳಿಗೆ ಅವರು ಸ್ಪಷ್ಟವಾಗಿ ಉತ್ತರಗಳನ್ನು ನೀಡಿದರು.

ನಂತರದ ಗೋಷ್ಠಿ 'ಲಿಂಗ ನ್ಯಾಯ ಮತ್ತು ಜಾತ್ಯತೀತತೆ' ವಿಷಯ ಕುರಿತಾಗಿತ್ತು. ಇಲ್ಲಿ ಎಲ್ಲಾ ಶಿಬಿರಾರ್ಥಿಗಳು ಈ ವಿಷಯಗಳ ಬಗ್ಗೆ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ಇತ್ತು. ಈ ಅವಕಾಶವನ್ನು ಎಲ್ಲಾ ಶಿಬಿರಾರ್ಥಿಗಳು ಚೆನ್ನಾಗಿ ಬಳಸಿಕೊಂಡರು.

ವಿಚಾರ ವಿನಿಮಯಕ್ಕೆ ಚಾಲನೆ ನೀಡಿದವರು ಬಿ.ಸಿ.ಸುಷ್ಮಿತಾ.

ನಮ್ಮ ದೈನಂದಿನ ಜೀವನದಲ್ಲಿ ಹೇಗೆ ಲಿಂಗ ಅಸಮಾನತೆ ಹಾಸು ಹೊಕ್ಕಾಗಿದೆ? ಅರಿಯದೇ ನಾವೂ ಹೇಗೆ ಲಿಂಗ ಅಸಮಾನತೆ ಒಳಗೊಂಡಿರುವ ಚಟುವಟಿಕೆಗಳಲ್ಲಿ ಭಾಗಿಯಾಗಿ ಬಿಡುತ್ತೇವೆ? ಎಲ್ಲರ ಮನೆಗಳಲ್ಲಿ ನಿರ್ದಿಷ್ಟ ಕೆಲಸಗಳು ಲಿಂಗ ಆಧಾರದಲ್ಲಿ ಹಂಚಿಕೆಯಾಗಿವೆ ಅಂದರೆ, ಕಸ ಗುಡಿಸುವುದು, ಬಟ್ಟೆ ಒಗೆಯುವುದು, ವಾಷಿಂಗ್ ಮಷಿನ್‌ಗಳಿಗೆ ಬಟ್ಟೆ ಹಾಕುವುದು, ಚಹಾ/ತಿಂಡಿ/ಅಡುಗೆ ಮಾಡುವುದು ಮಹಿಳೆಯರ ಕೆಲಸ ಎಂದಾಗಿಬಿಟ್ಟಿದೆ? ಎಂಬ ವಿಷಯ ಚರ್ಚೆಗೆ ಬಂತು.

ಮನೆಯಲ್ಲೇ ಸೋದರ–ಸೋದರಿಯರು, ಅಪ್ಪ–ಮಗಳು ಅನೇಕ ವಿಷಯಗಳನ್ನು ಮುಕ್ತವಾಗಿ ಮಾತನಾಡುವ ವಾತಾವರಣ ಇಲ್ಲವಾಗಿದೆ; ಮುಟ್ಟಿಗೆ ಸಂಬಂಧಿಸಿದ ವಿಷಯವನ್ನು ಸೋದರಿ ತನ್ನ ಸೋದರ/ತಂದೆ ಜೊತೆಗೆ ಮಾತಾಡುವ ಪರಿಸ್ಥಿತಿಯೇ ನಿರ್ಮಾಣವಾಗಿಲ್ಲ ಎಂಬ ವಿಷಯವನ್ನೂ ಚರ್ಚೆಗೆ ತರಲಾಯಿತು.




ಚಿತ್ರದಲ್ಲಿ (ಎಡದಿಂದ) ಮಂಗ್ಳೂರ ವಿಜಯ, ಪುಷ್ಪಲತಾ, 'ಸ್ಫೂರ್ತಿಧಾಮ' ಕೇಂದ್ರದ ಅಧ್ಯಕ್ಷರಾದ ಎಸ್. ಮರಿಸ್ವಾಮಿ ಪ್ರೊ॥ ಹನುಮಂತ, ಟಿ. ಗಜೇಂದ್ರ ಮತ್ತು ಬಿ.ಸಿ. ಸರ್ವೇಶ್ ಕುಮಾರ್

## 'ಅರಿವು' ಮಾಸಪತ್ರಿಕೆ ಬಿಡುಗಡೆ ಕಾರ್ಯಕ್ರಮ

'ಅರಿವು' ಮಾಸಪತ್ರಿಕೆ, ಬೆಂಗಳೂರು ದಲಿತ್ ಫೋರಮ್ (ಬಿ.ಡಿ.ಎಫ್.) ಪ್ರಕಟಣೆ ಮಾಡುತ್ತಿರುವ ಮಹತ್ವದ ಪತ್ರಿಕೆ. ದಲಿತರ, ಶೋಷಿತರ, ಅವಕಾಶ ವಂಚಿತರ ಧ್ವನಿ ಆಗುವ ಉದ್ದೇಶವನ್ನು ಹೊಂದಿರುವ ಈ ಪತ್ರಿಕೆಯ ಸಂಪಾದಕರು ಟಿ.ಗಜೇಂದ್ರ.

ಕರ್ನಾಟಕ ಸಮಾಜವಾದಿ ವೇದಿಕೆ ಮತ್ತು ಬೆಂಗಳೂರು ದಲಿತ್ ಫೋರಮ್ ಎರಡೂ ಸಮಾನ ಆಶಯ ಹೊಂದಿರುವ ಸಂಸ್ಥೆಗಳು. ಎರಡೂ ಬಾಬಾಸಾಹೇಬ್ ಅಂಬೇಡ್ಕರರನ್ನು ಸ್ಫೂರ್ತಿದಾತರೆಂದು ಪರಿಗಣಿಸಿವೆ. ಹೀಗಾಗಿ, ಶಿಬಿರದ ಅವಧಿಯಲ್ಲಿ 'ಅರಿವು' ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಏರ್ಪಾಟಾಗಿದ್ದು ಅರ್ಥಪೂರ್ಣವಾಗಿತ್ತು.

ಪತ್ರಿಕೆ ಬಿಡುಗಡೆಯನ್ನು 'ಸ್ಫೂರ್ತಿಧಾಮ' ಕೇಂದ್ರದ ಅಧ್ಯಕ್ಷರಾದ ಎಸ್. ಮರಿಸ್ವಾಮಿ ಮಾಡಿದರು. ಪ್ರೊ॥ ಹನುಮಂತ, ಪುಷ್ಪಲತಾ, ಮಂಗ್ಳೂರ ವಿಜಯ, ಟಿ. ಗಜೇಂದ್ರ, ಬಿ.ಸಿ. ಸರ್ವೇಶ್ ಕುಮಾರ್ ವೇದಿಕೆ ಮೇಲಿದ್ದರು.

ಬಿಡಿಎಫ್ ಸದಸ್ಯರು ಮತ್ತು ಶಿಬಿರಾರ್ಥಿಗಳು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪುರುಷರು–ಮಹಿಳೆಯರು ಮನೆಯಲ್ಲಿ ಮತ್ತು ಸಮಾಜದಲ್ಲಿ ಸೌಹಾರ್ದದಿಂದ ಮಾತಾಡುವ ವಾತಾವರಣ ನಿರ್ಮಾಣವಾಗಬೇಕಿದೆ ಎಂಬುದನ್ನು ಗ್ರಹಿಸಲಾಗಿ, ಎಲ್ಲಾ ಶಿಬಿರಾರ್ಥಿಗಳು ಈ ವಿಷಯದಲ್ಲಿ ಸಹಮತ ವ್ಯಕ್ತಪಡಿಸಿದರು.

'ಜಾತ್ಯತೀತತೆ' ಎಂಬ ವಿಷಯದ ಮೇಲೆ ಶಿಬಿರಾರ್ಥಿಗಳು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಜಾತ್ಯತೀತತೆ ಎಂಬುದು ಜಾತಿಗೆ ಹೆಚ್ಚು ಸಂಬಂಧಿಸಿಲ್ಲ. ಅದು ಧಾರ್ಮಿಕ ಪೂರ್ವಾಗ್ರಹಕ್ಕೆ ಸಂಬಂಧಿಸಿದೆ ಎಂಬ ಅಂಶವನ್ನು ಪ್ರಾರಂಭದಲ್ಲಿ ಸ್ಪಷ್ಟಪಡಿಸಲಾಯಿತು.

ಧರ್ಮ ಎಂಬುದು ಪ್ರತಿಯೊಬ್ಬರ ವೈಯಕ್ತಿಕ ವಿಷಯ ಆಗಿದ್ದು, ಅದಕ್ಕೆ ಸರ್ಕಾರದ ಒತ್ತಾಸೆ ಬೇಕಿಲ್ಲ. ಎಲ್ಲಾ ಧರ್ಮೀಯರನ್ನು ಸರ್ಕಾರ ಸಮಾನವಾಗಿ ಕಾಣಬೇಕು. ಎಲ್ಲರಿಗೆ ಅದು ನೆರವು ನೀಡಬೇಕು. 'ಹಿಂದೂ ರಾಷ್ಟ್ರ' ಎಂದೆಲ್ಲಾ ಮಾತನಾಡುವುದು ಸರಿಯಲ್ಲ. ಇದು ಎಲ್ಲರಿಗೆ ಸೇರಿದ ರಾಷ್ಟ್ರ. ಹಾಗಾಗಿ, ಕೋಮುವಾದ ಬೆಳೆಯಲು ಬಿಡಕೂಡದು. ಜನರಲ್ಲಿ –ವಿಶೇಷವಾಗಿ ಯುವಜನರಲ್ಲಿ– ಜಾತ್ಯತೀತತೆ ಮೂಡುವಂತಾಗುವ ನಿಟ್ಟಿನಲ್ಲಿ ನಾವು ಶ್ರಮಿಸಬೇಕು ಎಂದು ಶಿಬಿರಾರ್ಥಿಗಳು ಅಭಿಪ್ರಾಯಪಟ್ಟರು.

* * *

ಎರಡನೇ ಗೋಷ್ಠಿಯು ವಿಶಿಷ್ಟವಾಗಿತ್ತು. ಸಮಾಜವಾದಿ ವಿಚಾರವನ್ನು ಸುಮಾರು 25 ವರ್ಷಗಳ ಹಿಂದೆಯೇ ಬೆಳೆಸಿಕೊಂಡು, ತಮ್ಮ ಮಿತಿಯಲ್ಲಿ ಸಮಾಜವಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ, ಹೋರಾಟಗಳಲ್ಲಿ ಭಾಗವಹಿಸುತ್ತಾ, ಕ್ರಿಯಾಶೀಲರಾಗಿದ್ದ ನಾಲ್ವರನ್ನು ವಿಶೇಷವಾಗಿ ಶಿಬಿರಕ್ಕೆ ಆಹ್ವಾನಿಸಲಾಗಿತ್ತು.

ಇವರುಗಳೇ ಅಂಬಿಕಾ ಗೌಡ, ಗುರುರಾಜ ಬುಧ್ಯ, ಅಲಿಬಾಬಾ ಮತ್ತು ಕೆ.ಆರ್. ಸುಭಾಷ್. ಇವರ ವಿಚಾರ, ಅನಿಸಿಕೆ, ಅಭಿಪ್ರಾಯ ಮತ್ತು ಅನುಭವ ಶಿಬಿರಾರ್ಥಿಗಳಿಗೆ ತಿಳಿಯಲಿ, ಇವರೊಂದಿಗೆ ಶಿಬಿರಾರ್ಥಿಗಳು ಸಂವಾದ ನಡೆಸಲಿ ಎಂಬುದು ಶಿಬಿರ ಸಂಘಟಕರ ಅಭಿಮತವಾಗಿತ್ತು. ಹೀಗಾಗಿ ಈ ಗೋಷ್ಠಿಯನ್ನು ಏರ್ಪಡಿಸಲಾಗಿತ್ತು.

ಇವರುಗಳು ತಮ್ಮ ವಿಚಾರ, ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಂಡರು. ತಾವು ಸಮಾಜವಾದಿ ಚಟುವಟಿಕೆಗಳ ಕಡೆಗೆ ಆಕರ್ಷಿತರಾಗಿದ್ದು ಹೇಗೆ ಎಂಬುದನ್ನು ವಿವರಿಸಿದರು. ಸಮಾಜವಾದಿ ವಿಚಾರವನ್ನು ವಿದ್ಯಾರ್ಥಿ–ಯುವಜನರಲ್ಲಿ ಪ್ರಸಾರ ಮಾಡುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಕೈಗೊಳ್ಳಲಾಗುವ ಎಲ್ಲಾ ಪ್ರಯತ್ನಗಳೊಂದಿಗೆ ತಾವು ಇರುವುದಾಗಿ, ತಮ್ಮ ಕಡೆಯಿಂದ ಎಲ್ಲಾ ರೀತಿಯ ಸಲಹೆ, ಸಹಕಾರ ನೀಡುವುದಾಗಿ ಅವರು ಭರವಸೆ ನೀಡಿದರು.

ಕಡೆಯಲ್ಲಿ, ಈ ನಾಲ್ಕೂ ಜನರನ್ನು ಶಾಲು ಹೊದಿಸುವ ಮೂಲಕ ಗೌರವಿಸಲಾಯಿತು. ಶಿಬಿರಾರ್ಥಿಗಳ ಸರಾಸರಿ ವಯಸ್ಸು 25 ಆಗಿದ್ದರೆ, ಶಿಬಿರವನ್ನು ಸಂಘಟಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದವರ ವಯಸ್ಸು 60 ಆಗಿತ್ತು. ಶಿಬಿರದಲ್ಲಿ ಗೌರವಿಸಲ್ಪಟ್ಟವರ ಸರಾಸರಿ ವಯಸ್ಸು 40 ಆಗಿತ್ತು. ಒಟ್ಟಾರೆ, ಈ ಮೂರೂ ವಯೋಮಾನದವರು ಸಮಾಜವಾದದ ಬಗ್ಗೆ ತಮ್ಮ ಹೃದಯದಲ್ಲಿ ಇದ್ದ ಕಾಳಜಿಯನ್ನು ವ್ಯಕ್ತಪಡಿಸಿದ್ದುದು, ಸಮಾಜವಾದವನ್ನು ತಿಳಿದುಕೊಳ್ಳುವ ಮತ್ತು ತಿಳಿಸುವ ಕೆಲಸಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದುದು ವಿಶೇಷವಾಗಿತ್ತು.

* * *

ಮಧ್ಯಾಹ್ನದ ಊಟದ ಬಳಿಕ, ಎಲ್ಲಾ ಶಿಬಿರಾರ್ಥಿಗಳು ಮತ್ತೆ ಸೆಮಿನಾರ್ ಹಾಲ್‌ಗೆ ಬಂದರು.



ಶಿಬಿರಾರ್ಥಿಗಳು (ಒಂದು ಪಾರ್ಶ್ವನೋಟದ ಚಿತ್ರ)

ಅವರು ಕೊನೆಯ ಗೋಷ್ಠಿಯಲ್ಲಿ ಭಾಗವಹಿಸಲು ತವಕಪಡುತ್ತಿದ್ದರು.

ಆ ಗೋಷ್ಠಿ ವಿಶೇಷವಾದುದು. ಒಂದೂವರೆ ದಿನದಲ್ಲಿ ಸಮಾಜವಾದ ಕುರಿತು ತಾವು ತಿಳಿದುಕೊಂಡಿದ್ದರಲ್ಲಿ ತುಸು ಭಾಗವನ್ನು ಸಮಾಜಕ್ಕೆ ದಾಟಿಸುವ ರೀತಿ ಯಾವುದು? ಶಿಬಿರದ ನಂತರ ತಾವೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋದ ಬಳಿಕ, ಏನು ಮಾಡಬೇಕು? ಇಲ್ಲಿ ಕಲಿತದ್ದನ್ನು ಬೇರೆಯವರಿಗೆ ಹೇಳುವ ಬಗೆ ಯಾವುದು? ಅದನ್ನು ಮಾಡುವುದು ಹೇಗೆ? ಮುಂತಾದ ಪ್ರಶ್ನೆಗಳಿಗೆ ಆ ಗೋಷ್ಠಿಯಲ್ಲಿ ಉತ್ತರ ದೊರಕುವಂತಿತ್ತು.

ಗೋಷ್ಠಿಯನ್ನು ನಿರ್ವಹಣೆ ಮಾಡಿದ ಮಂಗ್ಳೂರ ವಿಜಯ, ಇವೇ ಪ್ರಶ್ನೆಗಳನ್ನು ಎಲ್ಲರ ಮುಂದೆ ಇಟ್ಟು, ತಮ್ಮ ಸಲಹೆಯನ್ನೂ ನೀಡಿದರು.

ಆಗ ಅವರು ಎಲ್ಲರಿಗೆ ಪರಿಚಯಿಸಿದ್ದು ಒಟ್ಟು 15 ಪುಸ್ತಕಗಳನ್ನು. ಒಂದೊಂದೂ ಪುಸ್ತಕವನ್ನು ಶಿಬಿರಾರ್ಥಿಗಳಿಗೆ ತೋರಿಸುತ್ತಾ, ಅದರ ವಿಶೇಷತೆಯನ್ನು ವಿವರಿಸುತ್ತಾ, ಇಂಥ ಪುಸ್ತಕಗಳನ್ನು ನಿಮ್ಮ ಸುತ್ತಮುತ್ತಲ ವಿದ್ಯಾರ್ಥಿ–ಯುವಜನರಿಗೆ ಪರಿಚಯಿಸುವ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವುದು ನಿಮಗೆ ಸಾಧ್ಯ ಇದೆಯೆ? ಎಂದು ಅವರು ಎಲ್ಲರನ್ನೂ ಕೇಳಿದರು.

'ಹತ್ತಿರದ ಶಾಲೆಗೆ ಹೋಗಿ; 9–10ನೇ ಕ್ಲಾಸ್ ವಿದ್ಯಾರ್ಥಿ–ವಿದ್ಯಾರ್ಥಿನಿಯರೊಂದಿಗೆ 40 ನಿಮಿಷ ಮಾತನಾಡುವ ಅವಕಾಶವನ್ನು ಮುಖ್ಯ ಶಿಕ್ಷಕರಿಂದ ಪಡೆದುಕೊಳ್ಳಿ. ಅವರಿಗೆ ಈ ಪುಸ್ತಕದಲ್ಲಿನ ವಿಷಯವನ್ನು ಸಂಕ್ಷಿಪ್ತವಾಗಿ ಮತ್ತು ಸರಳವಾಗಿ ತಿಳಿಸಿ. ನಂತರ, ಅವರಿಗೆ ಈ ಪುಸ್ತಕದ ಕೆಲವು ಪ್ರತಿಗಳನ್ನು ನೀಡಿ, 'ಇದನ್ನು ಓದಿಕೊಳ್ಳಿ, ಚರ್ಚಿಸಿ, ಶಿಕ್ಷಕರ ಮಾರ್ಗದರ್ಶನ ಪಡೆದುಕೊಳ್ಳಿ' ಎಂದು ಹೇಳುವುದನ್ನು ಮಾಡಬಹುದಲ್ಲವೆ? ಎಂದು ಶಿಬಿರಾರ್ಥಿಗಳನ್ನು ಮಂಗ್ಳೂರ ವಿಜಯ ಕೇಳಿದರು.



ಶನಿವಾರ ಸಂಜೆ ಪ್ರಕೃತಿ ಮತ್ತು ಬುದ್ಧ ಪ್ರತಿಮೆಯ ಮಡಿಲಲ್ಲಿ ಶಿಬಿರಾರ್ಥಿಗಳೊಂದಿಗೆ ಸಮಾಲೋಚನೆ

## ಡಿಸೆಂಬರ್ 4–5ರಂದು ನಡೆದ ಶಿಬಿರದ ಆದಾಯ ಮತ್ತು ವೆಚ್ಚ

| ಆದಾಯ | | ವೆಚ್ಚ | |
|---|---|---|---|
| ಬಿ.ಡಿ.ಎಫ್. | ರೂ. 10000 | ಊಟ, ಉಪಾಹಾರ, ಚಹಾ | ರೂ. 21200 |
| ಅಜಮೀರ್ ಪಾಷಾ | ರೂ. 5000 | ಫೋಲ್ಡರ್ಸ್, ಪೆನ್, ಪೇಪರ್ | ರೂ. 1200 |
| ಪ್ರೊ॥ ಹನುಮಂತ | ರೂ. 5000 | ಸಹಾಯಕ ಸಿಬ್ಬಂದಿಗೆ ಟಿಪ್ಸ್ | ರೂ. 1200 |
| ಅನುಪಮಾ | ರೂ. 3000 | ಬ್ಯಾನರ್ಸ್ | ರೂ. 1200 |
| ಸುಷ್ಮಿತಾ | ರೂ. 2000 | ಸರ್ಟಿಫಿಕೇಟ್ಸ್ (100) | ರೂ. 2000 |
| ಬಿ.ಎನ್.ಶಾರದಾ | ರೂ. 2000 | ಸ್ಟೇಷನರಿ ವಸ್ತುಗಳು | ರೂ. 200 |
| ಬಿ.ಸಿ.ಸರ್ವೇಶ್ ಕುಮಾರ್ | ರೂ. 1000 | ಶಾಲುಗಳು(4) | ರೂ. 2100 |
| | | ಶಿಬಿರಾರ್ಥಿಗಳಿಗೆ ಪುಸ್ತಕಗಳು | ರೂ. 7500 |
| ಒಟ್ಟು | ರೂ. 28000 | ಒಟ್ಟು | ರೂ. 36600 |
| ಕೊರತೆ | ರೂ. 8,600 | | |
| ಒಟ್ಟು | ರೂ. 36600 | | |

ಕೊರತೆಯಾಗಿರುವ ಮೊತ್ತ ರೂ. 8,600/–ಗಳನ್ನು, ಕರ್ನಾಟಕ ಸಮಾಜವಾದಿ ಫೋರಮ್ ಬಳಿ ಇರುವ ಮೊತ್ತದಿಂದ ಸರಿದೂಗಿಸಿಕೊಳ್ಳಲಾಗುವುದು.

"ಈ ಪುಸ್ತಕಗಳನ್ನು ನೀವು ಶಾಲೆಯ ಶಿಕ್ಷಕರಿಗೂ ನೀಡಬಹುದು. ಪಿಯು ಅಥವಾ ಪದವಿ ಕಾಲೇಜ್ ಉಪನ್ಯಾಸಕ/ಪ್ರಾಧ್ಯಾಪಕರಿಗೂ ನೀಡಬಹುದು' ಇಂಥ ಕೆಲಸಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಬಯಸುವಿರಾ?' ಎಂದು ಕೇಳಿ, 'ಸ್ಪಷ್ಟವಾಗಿ, ಮುಲಾಜಿಲ್ಲದೆ ಉತ್ತರಿಸಿ. ಸಾಧ್ಯ ಇದ್ದರೆ, ಸಾಧ್ಯ ಇದೆ ಎಂದು ತಿಳಿಸಿ; ಇಲ್ಲದಿದ್ದರೆ ಸಾಧ್ಯ ಇಲ್ಲ ಎಂದು ತಿಳಿಸಿ. ನೀವು ನಿಮ್ಮ ಮನಸ್ಸಿನಲ್ಲಿ ಇರುವುದನ್ನೇ ಹೇಳಬೇಕು. ಹೇಳಿದಂತೆ ನಡೆದುಕೊಳ್ಳಬೇಕು' ಎಂದು ತಾಕೀತು ಮಾಡಿದರು.

ಎಲ್ಲಾ 15 ಪುಸ್ತಕಗಳನ್ನು ಎಲ್ಲಾ ಶಿಬಿರಾರ್ಥಿಗಳಿಗೆ ಉಚಿತವಾಗಿ ನೀಡಲಾಯಿತು. ನಿಮ್ಮ ಮಿತ್ರರಿಗೆ ನೀಡಲಿಕ್ಕಾಗಿ ಪುಸ್ತಕಗಳು ಬೇಕಿದ್ದರೆ, ಅವುಗಳನ್ನೂ ಉಚಿತವಾಗಿ ಪಡೆದುಕೊಳ್ಳಬಹುದು ಎಂದು ತಿಳಿಸಿದಾಗ, ಅನೇಕರು ಹೆಚ್ಚು ಪುಸ್ತಕಗಳನ್ನು ತೆಗೆದುಕೊಂಡರು.

'ಹೆಚ್ಚುವರಿ ಪುಸ್ತಕಗಳನ್ನು ನೀವು ಯಾರಿಗೆ ಕೊಡುವಿರೋ, ಅವರ ಮೊಬೈಲ್ ನಂಬರ್ ಕೊಡಬೇಕು' ಎಂದು ಅವರು ಹೇಳಿದಾಗ, ಶಿಬಿರಾರ್ಥಿಗಳಲ್ಲಿ ಅದಕ್ಕೂ ಒಪ್ಪಿಗೆ ಸೂಚಿಸಿದರು.

ಕಡೆಯಲ್ಲಿ ಶಿಬಿರಾರ್ಥಿಗಳು ಇಡೀ ಶಿಬಿರದ ಬಗ್ಗೆ ತಮ್ಮ ಅನಿಸಿಕೆ–ಅಭಿಪ್ರಾಯಗಳನ್ನು ತಿಳಿಸಿದರು. ಕೆಲವರು 'ಇಂಥ ಶಿಬಿರ ನಮ್ಮ ಜಿಲ್ಲೆಯಲ್ಲಿ ಮಾಡಬಹುದೆ?' ಎಂದು ಕೇಳಿದರು. 'ಸ್ಫೂರ್ತಿಧಾಮ ಪರಿಸರ ಚೆನ್ನಾಗಿದೆ; ನಿಸರ್ಗದ ಮಡಿಲಲ್ಲಿ ನಾವು ಎರಡು ದಿನ ಕಳೆದದ್ದು ಖುಷಿ ಕೊಟ್ಟಿತು' ಎಂದು ಇನ್ನೂ ಕೆಲವರು ತಿಳಿಸಿದರು.

'ಕರ್ನಾಟಕ ಸಮಾಜವಾದಿ ವೇದಿಕೆ ಬಗ್ಗೆ ಕೂಡ ನೀವು ಏನೇ ಪ್ರಶ್ನೆಗಳನ್ನು ಕೇಳಬಹುದು' ಎಂದು ಮಂಗ್ಳೂರ ವಿಜಯ ತಿಳಿಸಿದಾಗ, ಕೆಲವಾರು ಶಿಬಿರಾರ್ಥಿಗಳು ಮೊದಲು ಪ್ರಶ್ನೆ ಕೇಳಲು ಮುಂದೆ ಬರಲಿಲ್ಲ. 'ಈ ಶಿಬಿರ ಏರ್ಪಾಟು ಮಾಡಿದ್ದೀರಲ್ಲ, ಇದರ ಖರ್ಚು ಹೇಗೆ ಭರಿಸುತ್ತೀರಿ?' ಎಂದು ಕೂಡ ನೀವು ಕೇಳಬಹುದು' ಎಂದಾಗ, ಕೆಲವರಿಗೆ ಆಶ್ಚರ್ಯ ಆಯಿತು. ಇನ್ನೂ ಕೆಲವರು, 'ಹೀಗೆ ಕೇಳಿದರೆ, ಸಂಘಟಕರು ಸಿಟ್ಟು ಮಾಡಬಹುದು' ಎಂದು ಅಭಿಪ್ರಾಯಪಟ್ಟರು.

'ಬೇರೆಯವರು ಹೇಗೋ, ಏನೋ. ಕರ್ನಾಟಕ ಸಮಾಜವಾದಿ ಫೋರಮ್ ಅಂತೂ ಸಿಟ್ಟು ಮಾಡುವುದಿಲ್ಲ. ಆದ್ದರಿಂದ, ನೀವು ಇಂಥ ಪ್ರಶ್ನೆಯನ್ನೂ ಕೇಳಬಹುದು ಎಂದು ನಾವೇ ಹೇಳಿಕೊಡುತ್ತಿದ್ದೇವೆ' ಎಂದು ಹೇಳಿದ ಮಂಗ್ಳೂರ ವಿಜಯ,

'ಈ ಶಿಬಿರದ ವ್ಯವಸ್ಥೆಗೆ ಕೆಲವಾರು ಜನರು ದಾನ ನೀಡಿದ್ದಾರೆ. ಕರ್ನಾಟಕ ಸಮಾಜವಾದಿ ಫೋರಮ್‌ಗೆ ಕೆಲವರು ಪ್ರತಿ ತಿಂಗಳೂ ದಾನ ನೀಡುತ್ತಿದ್ದಾರೆ. ಆ ಹಣದಲ್ಲಿ ಈ ಶಿಬಿರದ ವೆಚ್ಚವನ್ನು ಭರಿಸುತ್ತಿದ್ದೇವೆ' ಎಂದು ತಿಳಿಸಿದರು.

ಈ ಶಿಬಿರದ ವರದಿ ಮತ್ತು ಆದಾಯ–ಖರ್ಚು ಪಟ್ಟಿಯನ್ನು ಶಿಬಿರದ ನಂತರ ಸಿದ್ಧಪಡಿಸಲಾಗುತ್ತದೆ. ಅದನ್ನು ದಾನ ನೀಡಿದವರಿಗಷ್ಟೇ ಅಲ್ಲದೆ, ಬೇರೆಯವರಿಗೂ ಕೊಡಲು ಕರ್ನಾಟಕ ಸಮಾಜವಾದಿ ವೇದಿಕೆ ಸಿದ್ಧವಿದೆ. ಒಂದೆರಡು ವಾರಗಳ ಬಳಿಕ, ನೀವು ಫೋನ್ ಮಾಡಿ ಕೇಳಿದರೆ, ನಿಮಗೂ ಅದನ್ನು ಕೊಡಲಾಗುವುದು' ಎಂದು ಅವರು ಸ್ಪಷ್ಟಪಡಿಸಿದರು. ಕರ್ನಾಟಕ ಸಮಾಜವಾದಿ ವೇದಿಕೆಯ ಪಾರದರ್ಶಕ ಕಾರ್ಯಶೈಲಿ ಎಲ್ಲರಿಗೆ ಇಷ್ಟವಾಯಿತು.

2022ರಲ್ಲಿ ಕನಿಷ್ಠ ಮೂರು ಜಿಲ್ಲೆಗಳಲ್ಲಿ ಸಮಾಜವಾದಿ ವಿಚಾರ ಶಿಬಿರ ಏರ್ಪಡಿಸುವ ಬಗ್ಗೆ ಚರ್ಚಿಸಲಾಯಿತು.

ಎರಡು ದಿನಗಳ ಸಮಾಜವಾದಿ ವಿಚಾರ ಶಿಬಿರದ ವರದಿಯೊಂದಿಗೆ, ಈ ಶಿಬಿರ ಸಂಘಟನೆಗೆ ವೆಚ್ಚದ ವಿವರಗಳನ್ನು ಈ ಮೇಲೆ ನೀಡಲಾಗಿದೆ. ■

■ ಸಮಾಜದಲ್ಲಿ ಹಲವು ರೀತಿಗಳಲ್ಲಿ ಅನ್ಯಾಯ ನಡೆಯುತ್ತಿರಬಹುದು; ಅದನ್ನು ಅರಿತು, ಪರಿಹಾರ ರೂಪಿಸುವವರೇ ನಿಜವಾದ ಸಮಾಜವಾದಿಗಳು.




**ಕರ್ನಾಟಕ ಸಮಾಜವಾದಿ ವೇದಿಕೆ**
ಎಸ್–6, ರಿವೆಂಡೆಲ್ ಅಪಾರ್ಟ್‌ಮೆಂಟ್
ಐಡಿಯಲ್ ಹೋಮ್ಸ್ ಬಡಾವಣೆ, ಆರ್.ಆರ್.ನಗರ, **ಬೆಂಗಳೂರು–560 098 (ಮೊಬೈಲ್: 94491–02294)**
Please visit : karnatakasocialistforum.in